## 36

# ಕಷ್ಟ ಮತ್ತು ಸಿಹಿಯಾದ ಸುವಾರ್ತಾ ಕೆಲಸ

# (12:25-13:14)

ಅಧ್ಯಾಯ 11ರಲ್ಲಿನ ಕೊನೆಯ ಭಾಗದಲ್ಲಿ ಅಂತಿಯೋಕ್ಯದ ಸಹೋದರರು "ಯೂದಾಯ ಸೀಮೆಯಲ್ಲಿ ವಾಸವಾಗಿದ್ದ ಸಹೋದರರಿಗೆ ತಮ್ಮ ತಮ್ಮ ಶಕ್ತ್ಯಾನುಸಾರ ದ್ರವ್ಯ ಸಹಾಯ ಮಾಡಬೇಕೆಂದು ನಿಶ್ಚಯಿಸಿಕೊಂಡರು. ಹಾಗೆಯೇ ಮಾಡಿ ಅದನ್ನು ಬಾರ್ನಬ ಸೌಲರ ಕೈಯಿಂದ ಸಭೆಯ ಹಿರಿಯರಿಗೆ ಕಳುಹಿಸಿದರು" (11:29, 30). ಲೂಕನ ಲೆಕ್ಕಾಚ್ಚಾರವು ಕ್ರಮವಾಗಿದ್ದರೆ, "ಅರಸನಾದ ಹೆರೋದನು ಸಭೆಯವರಲ್ಲಿ ಕೆಲವರನ್ನು ಹಿಂಸೆ ಪಡಿಸುವ" ಸಮಯಕ್ಕೆ ಸರಿಯಾಗಿ ಬಾರ್ನಬ ಮತ್ತು ಸೌಲರು ಯೂದಾಯಕ್ಕೆ ಬಂದರು (12:1), ಅವರು ಯಾಕೋಬನ ಕೊಲ್ಲಲ್ಪಟ್ಟ ಹಾಗೂ ಪೇತ್ರನನ್ನು ಹಿಡಿಯಲ್ಪಟ್ಟ ಸ್ಥಳದಲ್ಲಿದ್ದರು. ಒಂದು ವೇಳೆ ಅಲ್ಲಿಯ ಪ್ರಾರ್ಥನಾ ಕೂಟದಲ್ಲೂ ಭಾಗಿಗಳಾಗಿರಬಹುದು.[1] ಅಲ್ಲಿಯೇ ಪೇತ್ರನು ತನ್ನ ಅದ್ಭುತ ವಾದ ಬಿಡುಗಡೆಯ ಕುರಿತು ಸಾಕ್ಷಿ ಹೇಳಿರಬಹುದು!

ಅಪೊಸ್ತಲರ ಕೃತ್ಯಗಳು 11:30ರಲ್ಲಿ ಮುಕ್ತಾಯವಾದ ಸಂಗತಿಯನ್ನು ಅಪೊಸ್ತಲರ ಕೃತ್ಯ 12:25 ಮುಂದುವರಿಸುತ್ತದೆ: "ಬಾರ್ನಬ ಸೌಲರು ಮಾಡಬೇಕಾದ ಧರ್ಮ ಕಾರ್ಯವನ್ನು ತೀರಿಸಿ, ಯೆರೂಸಲೇಮಿನಿಂದ[2] ಹಿಂದಿರುಗಿದರು"[3] (12:25ಎ), ಅಲ್ಲಿ ಹಂಚುವಿಕೆ ಹೇಗೆ ಉಂಟಾಯಿತು ಮತ್ತು ಯೂದಾಯರ ಪ್ರತಿಕ್ರಿಯೆ ಹೇಗಾಯಿತು ಎಂದು ನಿರೀಕ್ಷಿಸೋಣ.[4] ಬಾರ್ನಬ ಪೌಲರು ಅಂತಿಯೋಕ್ಯಕ್ಕೆ ಹಿಂದಿರುಗುವಾಗ, "ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ಅವರ ಸಂಗಡ ಕರಕೊಂಡು ಹೋದರು" (12:25ಬಿ). ಅಧ್ಯಾಯ 12ರಲ್ಲಿ;[5] ಮಾರ್ಕನಾದ, ಯೋಹಾನನ ಕುರಿತು ತಿಳಿಸಲಾಗಿದೆ. ಅವನು ಬಾರ್ನಬನ ಅಣ್ಣನ ಮಗನಾಗಿದ್ದನು ಉತ್ತೇಜನದ ಮಗನಾದ ಬಾರ್ನಬನು ಇವನನ್ನು ದೇವರ ಸೇವಕನನ್ನಾಗಿ ಮಾಡುವ ನಿರೀಕ್ಷೆಯಲ್ಲಿದ್ದನು.[6] ಮನುಷ್ಯರು ಅಂತಿಯೋಕ್ಯವನ್ನು ತಲುಪಿದಾಗ, ಅವರು ಯಾವ ವರ್ತಮಾನವನ್ನು ತಂದಿದ್ದರು! ಅವರು ತಮ್ಮ ಸೇವೆಯ ಕುರಿತು ಮಾತನಾಡದೆ, ಅವರು ಮಾಡಿದ ಸಾಹಸದ ಬಗ್ಗೆ ಮಾತನಾಡಿದರು!

ಬಾರ್ನಬ ಮತ್ತು ಪೌಲರ ಆಗಮನವು, ಆಧ್ಯಾಯ 13ರ ಮುನ್ನುಡಿಯನ್ನು ಆರಂಭಿಸುತ್ತದೆ:

> ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ ಬೋಧಕರೂ ಇದ್ದರು; ಯಾರಾರಂದರೆ - ಬಾರ್ನಬ, ನೀಗರನೆಂಬ ಸಿಮೆಯೋನ, ಕುರೇನ್ಯದ ಲೂಕ್ಯ, ಉಪ ರಾಜನಾದ ಹೆರೋದನ ಸಾಕತಮ್ಮನಾದ ಮೆನಹೇನ, ಸೌಲ ಇವರೇ. ಇವರು ಕರ್ತನನ್ನು ಸೇವಿಸುತ್ತಾ ಉಪವಾಸಮಾಡುತ್ತಾ ಇದ್ದಾಗ ಪವಿತ್ರಾತ್ಮನು - ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು. ಆಗ ಅವರು ಉಪವಾಸವಿದ್ದು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣಮಾಡಿ ಅವರನ್ನು ಕಳುಹಿಸಿಕೊಟ್ಟರು (13:1-3).

ಅಪೊಸ್ತಲರ ಕೃತ್ಯಗಳು 13 ಬಹಳ ಪ್ರಮುಖವಾದ ಅಧ್ಯಾಯವಾಗಿದೆ. ಅಪೊಸ್ತಲರ ಕೃತ್ಯಗಳು 13:1-3ರ ಭಾಗವು ಅಪೊಸ್ತಲರ ಕೃತ್ಯಗಳು ಪುಸ್ತಕದ ಅತಿ ಪ್ರಮುಖವಾದ ವಾಕ್ಯಭಾಗವಾಗಿದೆ. ಈ ವಾಕ್ಯಭಾಗದ ಮೊದಲು ಪೇತ್ರನು ಪ್ರಮುಖ ವ್ಯಕ್ತಿ, ಹಾಗೂ

ಯೆರೂಸಲೇಮು ಮುಖ್ಯ ಪಟ್ಟಣವಾಗಿತ್ತು, ಯೆಹೂದ್ಯರು ಮಾತ್ರ ಸುವಾರ್ತೆಯನ್ನು ಕೇಳುವವರಾಗಿದ್ದರು. ಅಪೊಸ್ತಲರ ಕೃತ್ಯಗಳು 13:1-3ರ ನಂತರ, ಪೌಲನೇ ಮುಖ್ಯ ವ್ಯಕ್ತಿಯಾಗಿರುವನು, ಮತ್ತು ಸುವಾರ್ತೆಯನ್ನು ಕೇಳಿದವರಲ್ಲಿ ಅನ್ಯರು ಮುಖ್ಯವಾಗಿದ್ದಾರೆ.

ಅಪೊಸ್ತಲರ ಕೃತ್ಯಗಳು 13ರಲ್ಲಿ ಸುವಾರ್ತೆಯ ಕುರಿತು ಯೇಸು ಮಾಡಿದ ಯೋಜನೆಯ ಮೂರನೆಯ ಹಂತವನ್ನು ನೋಡುತ್ತೇನೆ. ಅಪೊಸ್ತಲರ ಕೃತ್ಯಗಳು 1:8ರಲ್ಲಿ ಯೇಸು, "ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ *ಭೂಲೋಕದ ಕಟ್ಟ ಕಡೆಯವರಿಗೂ ನನಗೆ ಸಾಕ್ಷಿಗಳಾಗಿರಬೇಕು*" ಎಂದು ಹೇಳಿದ್ದನು. (ಒತ್ತಿ ಹೇಳಿದ್ದು ನನ್ನದು.) ಮೊದಲನೆಯ ಹಂತ ಯೆರೂಸಲೇಮು (ಅದನ್ನು ನೋಡಿದ್ದೇವೆ. ಅಧ್ಯಾಯ 2ರಲ್ಲಿ ಯೆರೂಸಲೇಮಿನಲ್ಲಿ ಸುವಾರ್ತೆ ಸಾರಲ್ಪಟ್ಟಿತು). ಹಂತ ಎರಡನೆಯದರಲ್ಲಿ ಯುದಾಯ ಮತ್ತು ಸಮಾರ್ಯಕ್ಕೆ ಸುವಾರ್ತೆ ಸಾರಲ್ಪಟ್ಟಿತು (ಅಧ್ಯಾಯ 8ರಲ್ಲಿ ಚದುರಿದ ಕ್ರೈಸ್ತರಲ್ಲಿ ಫಿಲಿಪ್ಪನು ಸಮಾರ್ಯಕ್ಕೆ ಹೋದನು). ಕೊನೇಯದಾಗಿ, ಸಭೆ ಸ್ಥಾಪನೆಗೊಂಡ ಹದಿನೈದು ವರ್ಷಗಳ ನಂತರ,[7] "ಸುವಾರ್ತೆಯ ಲೋಕದ ಕಟ್ಟಕಡೆಯ ವರೆಗೂ ಪ್ರಚಾರಗೊಂಡಿತು." ಅಧ್ಯಾಯ 13ರ ಅಂತ್ಯದಲ್ಲಿ ಪೌಲನು ನಂಬಿಕೆಯಿಲ್ಲದ ಯೆಹೂದ್ಯರಿಗೆ, "*ಲೋಕದ ಕಟ್ಟಕಡೆಯವರೆಗೆ* ಅನ್ಯರಿಗೆ ಸಾಕ್ಷಿ ಹೇಳಲು ಕರ್ತನು ನಮಗೆ ಅಪ್ಪಣೆ ಕೊಟ್ಟಿದ್ದಾನೆ ಅಂದನು" (13:47; ಒತ್ತಿ ಹೇಳಿದ್ದು ನನ್ನದು).

ಅಧ್ಯಾಯ 13ರಲ್ಲಿ ಪೌಲನ ಸೇವಾ ಪ್ರಯಾಣವು ಆರಂಭಗೊಳ್ಳುತ್ತದೆ. (ಅಪೊಸ್ತಲರ ಕೃತ್ಯದಲ್ಲಿರುವ ಅವನ ಪ್ರಯಾಣದ ನೆನಪು ನಮಗೆ ಉಂಟಾಗುತ್ತದೆ.) ಈ ಪ್ರಯಾಣದ ಕುರಿತು ಅರಿಯುವಾಗ, ನಾಶವಾಗುತ್ತಿರುವ ಮತ್ತು ಮರಣಕ್ಕೆ ತುತ್ತಾಗಿರುವ ಲೋಕಕ್ಕೆ ಸುವಾರ್ತೆ ಸಾರುವ ವಿಷಯದಲ್ಲಿ ಹರ್ಷ ಉಂಟಾಗುತ್ತದೆ.

13:1-14 ರ ಪಾಠದಲ್ಲಿ ಪೌಲನ ಪ್ರಯಾಣದ ಕುರಿತು ಮತ್ತು ಮುಂದಿನ ಎಂಟು ಅಥವಾ ಒಂಬತ್ತನೇ ಅಧ್ಯಾಯವರೆಗೆ ಅವನ ಸೇವೆಯ ಪ್ರಯತ್ನವನ್ನು ಗಮನಿಸುತ್ತೇವೆ, ಆ ಸೇವೆಯಲ್ಲಿ ಉಂಟಾದ ಕೆಲವು ಕಹಿ ಮತ್ತು ಸಿಹಿಯಾದ ಅನುಭವವನ್ನು ಮೊದಲಿಗೆ ಅಧ್ಯಯನ ಮಾಡೋಣ.[8]

## ಸೇವಾ ಕೆಲಸ: ಸಿಹಿಯಾದದ್ದು (13:1-3)

### ಅಮೋಘವಾದ ಕುಟುಂಬ (ವಚನ 1)

ವಚನ 1ರಲ್ಲಿ, "ಅಂತಿಯೋಕ್ಯದಲ್ಲಿದ್ದ ಸಭೆ" ಎಂದು ಪ್ರಾರಂಭವಾಗುತ್ತದೆ. ಹಿಂದಿನ ಪಾಠದಲ್ಲಿ, ಅಂತಿಯೋಕ್ಯದಲ್ಲಿ ಅಸ್ತಿತ್ವದಲ್ಲಿದ್ದ ವಿಶೇಷವಾದ ಸಭೆಯ ಕುರಿತು ತಿಳಿದೆವು: ಆ ಸಭೆಯವರು, ಮೊದಲಿಗೆ ಅನ್ಯರ ಬಳಿಗೆ ಹೋದವರಾಗಿದ್ದರು, ಅದು ಯೆಹೂದ್ಯ ಮತ್ತು ಅನ್ಯರನ್ನು ಒಳಗೊಂಡ ಪ್ರಥಮ ಸಭೆಯಾಗಿತ್ತು, ಇನ್ನೊಂದು ಸಭೆಗೆ ದ್ರವ್ಯಗಳನ್ನು ಕಳುಹಿಸಿದವರಲ್ಲಿ ಮೊದಲಿಗರಾಗಿದ್ದರು. ಲೋಕದ ಕಟ್ಟಕಡೆಗೆ ಸುವಾರ್ತೆಯನ್ನು ತಲುಪಿಸಿದವರಲ್ಲಿ, ಅಂತಿಯೋಕ್ಯದವರು ಮೊದಲಿಗರಾಗಿದ್ದರು. ನೀವು ದೇವರ ಸೇವೆಯನ್ನು ಮಾಡುವಾಗ, ಅಂತಿಯೋಕ್ಯ ಸಭೆಯವರು ಹೊಂದಿಕೊಂಡಿದ್ದ ದರ್ಶನವನ್ನು ಹೊಂದಿರುವ ಸಭೆಗಳ ಸಂಗಡ ಅನ್ಯೋನತೆಯನ್ನು ಹೊಂದಿರುವಿರಿ.

### ಅಮೋಘವಾದ ಸ್ನೇಹಿತರು (ವಚನ 1)

ನೀವು ಒಂದು ಉತ್ತಮವಾಗಿರುವ ಸುವಾರ್ತೆ ಕೆಲಸವನ್ನು ಮಾಡುವಾಗ, ಕರ್ತನ ದ್ರಾಕ್ಷೆ ತೋಟದಲ್ಲಿ ಕೆಲಸ ಮಾಡುತ್ತಿರುವ ಉತ್ತಮವಾದ ಇತರೆ ಕೆಲಸಗಾರರು ಸಹ ನಿಮಗೆ ಪರಿಚಯವಾಗುತ್ತಾರೆ. ಅಂತಿಯೋಕ್ಯದಲ್ಲಿದ್ದ ಇಂಥವರ ಕುರಿತು ವಚನ 1ರಲ್ಲಿ ಪಟ್ಟಿಯನ್ನು ನೀಡಲಾಗಿದೆ,

ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳು ಬೋಧಕರು ಇದ್ದರು: "ಯಾರಾರೆಂದರೆ ಬಾರ್ನಬ, ನೀಗರನೆಂಬ ಸಿಮೆಯೋನ, ಕುರೇನ್ಯದ ಲೂಕ್ಯ, ಉಪರಾಜನಾದ ಹೆರೋದನ ಸಾಕು ತಮ್ಮನಾದ ಮೆನಹೇನ ಸೌಲ ಇವರೆ." "ಪ್ರವಾದಿಗಳು ಹಾಗೂ ಬೋಧಕರಾದ" ಐದು ಜನ ವ್ಯಕ್ತಿಗಳಿದ್ದರು (ಪ್ರೇಲಿತರಾದವರು[10]). ಮೊದಲನೆಯದಾಗಿ ಉತ್ತೇಜನದ ಮಗನಾದ ಬಾರ್ನಬನು. ನಂತರ ನೀಗರನೆಂಬ ಸಿಮೆಯೋನ.[11] ಸಿಮೆಯೋನ ಎಂಬುದು ಯೆಹೂದ್ಯ ಹೆಸರು, ನೀಗರನೆಂಬುದು ರೋಮಾಯಾದ ಹೆಸರು ("ನೀಗರ್" ಎಂದರೆ ಲೀತೀನ್ ಭಾಷೆಯಲ್ಲಿ "ಕಪ್ಪು" ಎಂಬುದೆ ಪ್ರಾಯಶಃ ಅವನ ಬಣ್ಣ ಕಪ್ಪಾಗಿರಬಹುದು[12]). ಮುಂದಿನವನು ಕುರೇನ್ಯದ ಲೂಕ್ಯ "ಅವನು ... ಕುರೇನ್ಸದ ಒಬ್ಬನಾಗಿರಬಹುದು" ಒಂದು ವೇಳೆ, ಅವನು ಅಂತಿಯೋಕ್ಯದ ಸಭೆಯನ್ನು ಸ್ಥಾಪಿಸಿರಬಹುದು (11:20).[13] ನಂತರ "ಉಪರಾಜನಾದ ಹೆರೋದನ ಸಾಕು ತಮ್ಮನಾದ ಮನಹೇನನು"[14] ಅವನಿಗೆ ರಾಜಮನೆತನದ ಸಂಬಂಧವಿತ್ತು. (ಅವರ ಹೆಚ್ಚಿನ ಮಾಹಿತಿ ಹೊಂದಲು ಅಪೇಕ್ಷೆಯಲ್ಲದೇ!) ಕಡೆಯದಾಗಿ ಸೌಲನ ಹೆಸರನ್ನು ನೋಡುತ್ತೇವೆ, ಅಂತಿಯೋಕ್ಯ ಸಭೆಯಲ್ಲಿ ಅದು ಅವನ ಸ್ಥಾನವಾಗಿರಬಹುದು. ಅವನು ಸಭೆಯ ಸದಸ್ಯನಾಗಿ ಕೇವಲ ಒಂದು ವರ್ಷ ಮಾತ್ರವಾಗಿತ್ತು (11:26). ಬಹುಶಃ ಅವನು ಬಾರ್ನಬನ ಹಿಂಬಾಲಕನಾಗಿದ್ದನು.

ಪುನಃ ಆ ಹೆಸಲಿನ ಪಟ್ಟಿಯನ್ನು ನೋಡೋಣ: ಆ ಐದು ಜನರು ಲೋಕದ ವಿವಿಧ ಭಾಗದವರು, ಅವರು ವಿವಿಧ ಸಮಾಜದ ಹಿನ್ನಲೆಯುಳ್ಳವರು; ವಿವಿಧ ವರ್ಣವುಳ್ಳವರಾಗಿದ್ದರು. ಅವರೆಲ್ಲರಲ್ಲಿ ಸಾಮಾನ್ಯವಾದ ಯೇಸುವಿನ ಪ್ರೀತಿಯಿತ್ತು, ಜನಲಿಗಾಗಿ ಪ್ರೀತಿ, ಮತ್ತು ಎಲ್ಲರನ್ನೂ ಒಂದೂಗೂಡಿಸುವಂತ ಅಭಿಲಾಷೆಯುಳ್ಳವರಾಗಿದ್ದರು. ಅಸ್ಟ್ರೇಲಿಯಾದ ಸಿಡ್ನಿಯಲ್ಲಿ ನಾವೆ ಲ್ಲರೂ ಬೇರೆ ಬೇರೆಯವರಾಗಿದ್ದರೂ - ಮತ್ತು ಇತರೆ ಗುಂಪುಗಳವರ ಪಲಿಚಯ ನನಗಿದ್ದರೂ - ನಮ್ಮೆಲ್ಲರಲ್ಲಿಯೂ ಯೇಸುವಿನ ಪ್ರೀತಿಯು ಎದ್ದು ಕಾಣುತ್ತಿತ್ತು. ನೀವು ಸೇವೆಯಲ್ಲಿ ನಿರಂತ ರಾಗಿರುವಾಗ, ಈ ವಿಧವಾದ ಜನರೊಟ್ಟಿಗೆ ಒಗ್ಗೂಡುತ್ತೀಲಿ!

**ಅಮೋಘವಾದ ಅನ್ಯೋನ್ಯತೆ (ವಚನ 2)**

ಅಂತಿಯೋಕ್ಯ ಸಭೆಯಲ್ಲಿ ಕೆಲಸ ಮಾಡುತ್ತಿದ್ದ ಪ್ರಮುಖರ ಕುರಿತು ತಿಳಿದ ನಂತರ, ವಚನ 2ರಲ್ಲಿ "ಇವರು[15] ಕರ್ತನನ್ನು ಸೇವಿಸುತ್ತಾ[16] ಉಪವಾಸ ಮಾಡುತ್ತಾ ಇದ್ದಾಗ, ಪಲಿಶುದ್ಧಾತ್ಮನು ಹೇಳಿದ್ದೇನೆದರೆ ... ." "ಕೆಲಸವನ್ನು ಮಾಡುವದಕ್ಕಾಗಿ ಕಾಯುತ್ತಿದ್ದವರ ಸಂಗಡ," ಪಲಿಶುದ್ಧಾ ತ್ಮನು ಮಾತನಾಡದೇ ಸಭೆಯಲ್ಲಿ ಈಗಾಗಲೇ ಕೆಲಸ ನಿರ್ವಹಿಸುತ್ತಿದ್ದವರನ್ನು ತನ್ನ ಸೇವೆಗೆ ಆಲಿಸಿಕೊಂಡನು! ನಿಮ್ಮನ್ನು ಸಭೆಯಲ್ಲಿ ವಿಶೇಷ ಕಾರ್ಯಕ್ಕಾಗಿ ಆಯ್ಕೆ ಮಾಡದೇ ಇದ್ದರೆ, ನೀನು ಸಭೆಯಲ್ಲಿ ಮಾಡಬೇಕಾದ ಕಾರ್ಯವನ್ನು ಮಾಡುತ್ತಿಲ್ಲವೆಂದು ಸೂಚನೆಯಾಗಿರುತ್ತದೆ. "ದೇವರು ಅವರನ್ನು ಕಾರ್ಯನಿರತ ಮನುಷ್ಯರೆಂದು ಕರೆಯುತ್ತಾನೆ."

ಇದೇ ಮೊದಲ ಸಾಲಿ ಉಪವಾಸದ ಕುರಿತು (ಆಹಾರವಿಲ್ಲದೇ ಸ್ವಲ್ಪಕಾಲವಿದ್ದರೂ) ಅಪೊಸ್ತಲರ ಕೃತ್ಯದಲ್ಲಿನ ಪ್ರಥಮವಾಗಿ ತಿಳಿಸಲಾಗಿದೆ.[17] ಹಳೇ ಒಡಂಬಡಿಕೆಯಲ್ಲಿ ದೇಹ ದಂಡನೆಗಾಗಿ ಉಪವಾಸವನ್ನು ಆಚಲಿಸುತ್ತಿದ್ದರು; ಹೊಸ ಒಡಂಬಡಿಕೆಯಲ್ಲಿ ಉಪವಾಸವು ಆಧ್ಯತೆಗೆ ಒಳಪಟ್ಟಿರುತ್ತದೆ. ಆದಿ ಕ್ರೈಸ್ತರಿಗೆ ಆಹಾರವು ಪ್ರಮುಖವಾಗಿರಲಿಲ್ಲ. ದೇವರ ಚಿತ್ತವನ್ನು ನೆರವೇಲಿಸುವ ಸಲುವಾಗಿ ಆಹಾರವನ್ನು ತೊರೆಯುತಿದ್ದರು.[18]

ನೀವು ಕರ್ತನ ಸೇವೆಯಲ್ಲಿ ತೊಡಗಿರುವಾಗ, ಆದ್ಯತೆಗಳನ್ನು ಹೊಂದಿರುವ ಅನ್ಯೋ ನ್ಯತೆಗೆ ನೇರವಾದ ಪಾಲುಗಾಲಿಕೆಯನ್ನು ಹೊಂದಿರುತ್ತೀಲಿ. ದೇವರನ್ನು ಮನುಷ್ಯರನ್ನು ಸೇವಿಸುವ ಜನರೊಂದಿಗೆ ಸಂಬಂಧವನ್ನು ಹೊಂದುವಿಲಿ. ಅತಿಪಲಿಪೂರ್ಣವಾದ ಅನ್ಯೋನ್ಯತೆಯಿರುವದಿಲ್ಲ!

**ಅಮೋಘವಾದ ಅನುಭವ (ವಚನಗಳು 2, 3)**

ಇವರು ಕರ್ತನನ್ನು ಸೇವಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ, ಪರಿಶುದ್ಧಾತ್ಮನು, "ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ" (ವಚನ 2ಬಿ). ಬಹುಶಃ ಸಭೆಯು ಒಟ್ಟಾಗಿ ಸೇರಿಬಂದಿರುವಾಗ ಪರಿಶುದ್ಧಾತ್ಮನು ಮಾತನಾಡಿರಬಹುದು;[19] ಅವರು ಪ್ರಾರ್ಥನೆಗಾಗಿ ಸೇರಿಬಂದು ಲೋಕಕ್ಕೆಲ್ಲಾ ಸುವಾರ್ತೆಯನ್ನು ಸಾರುವ ಕುರಿತು ಚರ್ಚಿಸುತ್ತಿರಬಹುದು. ಮತ್ತೊಂದು ಸಾರಿ ಲೋಕಕ್ಕೆಲ್ಲಾ ಸುವಾರ್ತೆಯನ್ನು ಸಾರುವಂತ ಯೋಜನೆಯ ಕುರಿತು ದೇವರು ತಿಳಿಸುತ್ತಿದ್ದಾನೆ. ಪ್ರೇರಿತವಾದವರು ಸಭೆಯಲ್ಲಿದ್ದದ್ದರಿಂದ (ವಚನ 1), ದೇವರಾತ್ಮನು ಅವರಲ್ಲಿ ಒಬ್ಬನ ಮೂಲಕವಾಗಿ ಮಾತನಾಡಿರಬಹುದು.

*ಎರಡು* ವ್ಯಕ್ತಿಗಳನ್ನು ಪ್ರತ್ಯೇಕಿಸಿರಿ ಎಂದು ನಿರ್ಧಿಷ್ಟವಾಗಿ ಪರಿಶುದ್ಧಾತ್ಮನು ತಿಳಿಸಿದನು. ಯೇಸು "ನಿಯಮಿತಗೊಂಡ ಸೇವೆಗಾಗಿ" *ಇಬ್ಬಿಬ್ಬರನ್ನು* ಕಳುಹಿಸಿದ್ದನು (ಮಾರ್ಕ 6:7). ದೇವರ ಸೇವೆಯಲ್ಲಿ ಇದನ್ನು ಅನುಸರಿಸುವದು ಯೋಗ್ಯವಾಗಿದೆ.[20] "ಒಬ್ಬನಿಗಿಂತ ಇಬ್ಬರು ಲೇಸು; ಅವರ ಪ್ರಯಾಸಕ್ಕೆ ಒಳ್ಳೆಯ ಲಾಭ, ಒಬ್ಬನು ಬಿದ್ದರೆ ಇನ್ನೊಬ್ಬನು ಎತ್ತುವನು" (ಪ್ರಸಂಗಿ 4:9, 10). ಬಾರ್ನಬ ಮತ್ತು ಸೌಲರು ಆ ಇಬ್ಬರು ವ್ಯಕ್ತಿಗಳಾಗಿದ್ದರು, ವಚನ 1ರಲ್ಲಿ ತಿಳಿಸಿರುವ ಒಂದನೆಯ ಹಾಗೂ ಕೊನೆಯ ವ್ಯಕ್ತಿಗಳು ಬಾರ್ನಬನ ಆಯ್ಕೆಯನ್ನು ಸ್ವಾಗತಿಸಿದ್ದರೂ, ಸೌಲನ ಆಯ್ಕೆಯಲ್ಲಿ ಆಶ್ಚರ್ಯವುಂಟಾಗಿತ್ತು.[21] ಮೊದಲನೆಯ ಸೇವಾ ಪ್ರಯಾಣಕ್ಕಾಗಿ ಪರಿಶುದ್ಧಾತ್ಮನು ಅಂತಿಯೋಕ್ಯ ಸಭೆಯಲ್ಲಿದ್ದ ಉತ್ತಮವಾದ ವ್ಯಕ್ತಿಗಳನ್ನು ಆರಿಸಿಕೊಂಡಿದ್ದನು. ಈ ದಿವಸಗಳಲ್ಲಿ ಉತ್ತಮವಾದವರನ್ನು ಉಳಿಸಿಕೊಂಡು ಎರಡನೆಯ ದರ್ಜೆಯವರನ್ನು ಸುವಾರ್ತೆ ಸಾರಲು ಕಳುಹಿಸುತ್ತೇವೆ, ಆದರೆ ಪರಿಶುದ್ಧಾತ್ಮನು ಉತ್ತಮ ಕಾರ್ಯವನ್ನೇ ಮಾಡಿದನು.

ಪರಿಶುದ್ಧಾತ್ಮನ ಸಂದೇಶವೆನೆಂದರೆ, "ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಪ್ರತ್ಯೇಕಿ ಸಿರಿ ಎಂದು ಹೇಳಿದನು" (ವಚನ 2ಬಿ). ಇಲ್ಲಿರುವ ಕ್ರಿಯಾಪದವು ಈ ವ್ಯಕ್ತಿಗಳನ್ನು ಕರೆಯುವ ಸಂದರ್ಭವಾಗಿರಲಿಲ್ಲವೆಂಬ ಸೂಚನೆಯನ್ನು ನೀಡುತ್ತದೆ. ಯಾಕಂದರೆ ಪೌಲನನ್ನು ದೇವರು ಈಗಾಗಲೇ ತನ್ನ ಸೇವೆಗಾಗಿ ಕರೆದು ಅನೇಕ ವರ್ಷಗಳು ಸಂಧಿಸಿದ್ದವು. ಅದು ದಮಸ್ಕದ ದಾರಿಯ ಕರೆಯಾಗಿತ್ತು (ನೋಡಿರಿ 26:12-18). ಹಾಗೂ ಹಲ ವಾರು ವರ್ಷಗಳ ಹಿಂದೆಯೇ ಬಾರ್ನಬನು ಸಹ ಕರೆಯನ್ನು ಹೊಂದಿರಬಹುದು. ಈಗ ಅಂತಿಯೋಕ್ಯದ ಸಭೆಯವರು ಅವರನ್ನು ಕರ್ತನ ಸೇವೆಗೆ ಪ್ರತ್ಯೇಕಿಸಿ ಕಳುಹಿಸುವಂತ ಅವಕಾಶವನ್ನು ಪಡೆದಿದ್ದರು.

ಪರಿಶುದ್ಧಾತ್ಮನ ಸ್ವರಕ್ಕೆ ವಿಧೇಯರಾದ, ಅಂತಿಯೋಕ್ಯದ ಸಭೆಯವರು ಒಂದು ವಿಶೇಷ ಕೂಟವನ್ನು ಏರ್ಪಡಿಸಿದರು. ಆ ಕೂಟದಲ್ಲಿ ಅವರು "ಉಪವಾಸವಿದ್ದು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣೆ ಮಾಡಿದರು"[22] (ವಚನ 3ಎ). ಇದು ಬಾರ್ನಬನಿಗೂ, ಸೌಲನಿಗೂ ಮಹತ್ಕಾರ್ಯಗಳ ಶಕ್ತಿಯ ವರಗಳನ್ನು ಒದಗಿಸುವಂತ ಕೂಟಗಳಾ ಗಿರಲಿಲ್ಲ; ಯಾಕಂದರೆ ಅವರು ಈಗಾಗಲೇ ನುರಿತ ಪ್ರಸಂಗಿಗಳಾಗಿದ್ದರು (ವಚನ 1). ಅಂತಿಯೋಕ್ಯ ಸಭೆಯವರು *ಪರಿಶುದ್ಧಾತ್ಮನ* ವರಗಳನ್ನು ಆತ್ಮನಿಂದ ಪಡೆದು ಕಾರ್ಯವನ್ನು ಮಾಡದೇ *ಪರಿಶುದ್ಧಾತ್ಮನ* ಕ್ರಿಯೆಯನ್ನು ದೃಢಪಡಿಸುತ್ತಿದ್ದರು.

> ಅವರು ನೆರವೇರಿಸಿ ಬಂದ ಕೆಲಸಕ್ಕೋಸ್ಕರ ದೇವರ ಕೃಪಾಶಯಕ್ಕೆ ಒಪ್ಪಿಸಲ್ಪಟ್ಟವರಾಗಿ ಆ ಊರಿಂದಲೇ ಹೊರಟಿದ್ದರು. ಅಲ್ಲಿ ಸಭೆಯನ್ನು ಕೂಡಿಸಿ ದೇವರು ತಮ್ಮೊಂದಿಗಿದ್ದು ಮಾಡಿದ್ದೆಲ್ಲವನ್ನೂ ಆತನು ಅನ್ಯಜನರಿಗೆ ನಂಬಿಕೆಯ ಬಾಗಿಲನ್ನು ತೆರೆದದ್ದನ್ನೂ ವಿವರವಾಗಿ ಹೇಳಿದರು (14:26-27).[23]

ಆ ಕೂಟವು ಆ ಎರಡು ಮನುಷ್ಯರಿಗೂ ಹಾಗೂ ಸಭೆಗೂ ಪರಸ್ಪರವಾದ ಲಾಭವನ್ನುಂಟು ಮಾಡಿತ್ತು. ಆ ಕೂಟದಲ್ಲಿ ಬಾರ್ನಬ ಮತ್ತು ಸೌಲರು ತಾವು ಮುಂದೆ ಮಾಡಬೇಕಾಗಿದ್ದ

ಕೆಲಸದ ಕುರಿತು ಆಕರ್ಷಣೆಯನ್ನು ಹೊಂದಿದ್ದರು.[24] ಆ ಕೂಟದಲ್ಲಿ ಸಭೆಯವರಿಗೂ ಆ ಮನುಷ್ಯರಿಗಿದ್ದ ಅನ್ಯೋನ್ಯತೆಯ ಸಂಬಂಧವನ್ನು ನೋಡುತ್ತೇವೆ: ಇವರು ಅವರ ಅಪೊಸ್ತಲರಾಗಿದ್ದರು. ಅವರನ್ನು ಸಭೀಕರು ಸೇವೆಗಾಗಿ ಪ್ರತ್ಯೇಕಿಸಿದ್ದರು. (ಅಪೋಸ್ತಲರು *ಎಂದರೆ* "ಕಳುಹಿಸಲ್ಪಟ್ಟವನು" ಕರ್ತನಿಂದ ಅಥವಾ ಸಭೆಯಿಂದ[25] ಪೌಲ ಬಾರ್ನಬರು "ಅಪೊಸ್ತಲರಾಗಿದ್ದರು" 14:14.) "ಉಪವಾಸ" ಎಂದು ಹೇಳುವಾಗ ಅದು ಗಂಭೀರವಾದ ಕೆಲಸಕ್ಕೆ ಎಂಬ ಸೂಚನೆಯನ್ನು ನೀಡುತ್ತಿತ್ತು, ಅದರಲ್ಲಿ ಆತುರತೆ ಒಳಗೊಂಡಿರಲಿಲ್ಲ; ಅವರು ಸರಿಯಾದ ಕಾರ್ಯವನ್ನು ಮಾಡುವದಕ್ಕಾಗಿ ಸಮಯವನ್ನು ತಕ್ಕೊಂಡರು. ಈ ದಿವಸಗಳಲ್ಲಿ ಜನರನ್ನು ಸೇವೆಗೆ ಕಳುಹಿಸುವಾಗ ಇದೇ ವಿಧವಾದ ಕಾರ್ಯವನ್ನು ನಾವುಗಳು ಮಾಡಬೇಕು - ಅದು ಅವನ ಮನಸ್ಸಿನಲ್ಲೂ ನಮ್ಮ ಮನಸ್ಸಿನಲ್ಲೂ ಪ್ರಭಾವ ಬೀರುತ್ತದೆ.[26]

ಆ ಪ್ರಾರ್ಥನಾ ಕೂಟವು ಅಂತ್ಯಗೊಂಡ ನಂತರ, ಅಂತಿಯೋಕ್ಯದ ಸಹೋದರರು "ಅವರನ್ನು ಕಳುಹಿಸಿಕೊಟ್ಟರು" (ವಚನ 3ಬಿ). ಒಂದು ನಿಮಿಷಕಾಲ, ನೀವೇ ಬಾರ್ನಬ ಅಥವ ಪೌಲನ ಸ್ಥಾನದಲ್ಲಿ ನಿಂತಿರುವಿರಿ ಎಂದು ಊಹೆ ಮಾಡಿಕೊಳ್ಳಿರಿ, ನೀವು ಪಟ್ಟಣದ ಹೊರಗೆ ಹೋಗುವಾಗ, ಸಹೋದರರು ಮಾಡಿದ ಪ್ರಾರ್ಥನೆಯು ನಿಮ್ಮ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. ಆ ಇಬ್ಬರು ವ್ಯಕ್ತಿಗಳಲ್ಲಿ ವಿಭಿನ್ನವಾದ ಉದ್ವೇಗ ಉಂಟಾಗಿದ್ದವು; ಅವರ ಮುಂದಿನ ಕಾರ್ಯದ ಕುರಿತು ಸಂತೋಷ ಹಾಗೂ ಗೊಂದಲಗಳೆರಡು ಉಂಟಾಗಿದ್ದವು. ಆದಾಗ್ಯೂ ದೇವರು ಯೋಜಿಸಿರುವಂಥ ಸ್ಥಳದಲ್ಲಿಯೇ ಅವರು ಇದ್ದರು ಎಂಬುದನ್ನು ಸ್ಪಷ್ಟವಾಗಿ ಅರಿತಿದ್ದರು, ದೇವರು ನೇಮಿಸಿದ ಕೆಲಸದಲ್ಲಿಯೇ ಇದ್ದರು. ಸೇವೆ ಮಾಡುವವರು, ತಮ್ಮ ಜೀವಿತದಲ್ಲಿ ದೇವರ ಯೋಜನೆಯು ನೆರವೇರಿತು ಎಂದು ಅರಿಯುವಾಗ, ಆನಂದಗೊಳ್ಳುತ್ತಾರೆ.

ಅಂತಿಯೋಕ್ಯ ಸಭೆಯವರೊಂದಿಗೆ, ಪರಿಶುದ್ಧಾತ್ಮನು ನೇರವಾಗಿ ಮಾತನಾಡಿದಂತೆ ನಮ್ಮೊಂದಿಗೆ ಮಾತನಾಡುವದಿಲ್ಲ, ಆದಾಗ್ಯೂ ದೇವರು ಪ್ರತಿಯೊಬ್ಬ ಕ್ರೈಸ್ತನ ಕುರಿತು ಯೋಜನೆಯನ್ನು ಹೊಂದಿರುವನು.[27] ನಿಮ್ಮ ಜೀವಿತಕ್ಕಾಗಿ ದೇವರು ಹೊಂದಿರುವ ಯೋಜನೆಯನ್ನು ಅರಿಯಲು ಕೆಲವು ಸಂದರ್ಭದಲ್ಲಿ ಕಷ್ಟವಾಗತ್ತದೆ, ಆದರೆ ಪ್ರಯತ್ನಿಸುವುದು ಲೇಸು. ನಿಮಗೆ ದೇವರು ಅನುಗ್ರಹಿಸಿರುವ ತಲಾಂತುಗಳ ಮುಖಾಂತರ ದೇವರ ಯೋಜನೆ ಯನ್ನು ಒಂದು ವಿಧದಲ್ಲಿ ಅರಿಯಬಹುದು ಮತ್ತು ಇವುಗಳನ್ನು ದೇವರು ನಿಮ್ಮ ಸ್ವಾರ್ಥದ ಲಾಭಕ್ಕಾಗಿ ನೀಡಿರುವದಿಲ್ಲ. ಆದರೆ ಅದರಿಂದ ದೇವರಿಗೆ ಮಹಿಮೆಯಾಗಬೇಕು. ಮತ್ತು ದೇವರು ನಿಮಗೆ ಅನುಗ್ರಹಿಸಿರುವ ಅವಕಾಶದ ಮೂಲಕವಾಗಿಯೂ ಗುರುತಿಸಬಹುದು. ನಾನು *ಈ ಟ್ರೂಥ್ ಫಾರ್ ಟುಡೇಯನ್ನು* ಬರೆಯುವದಕ್ಕೆ ಆಹ್ವಾನ ನೀಡಿದ ಎಡ್ಡಿಕ್ಲೋಯರ್ ರವರ ಒಂದು ಅವಕಾಶವು ಸಹ ನನಗೆ ದೇವರ ಯೋಜನೆಯೇ, ಇದು ನನ್ನ ಜೀವಿತದ ಕೊನೆಯ ಮುಖ್ಯ ಪ್ರಯತ್ನವಾಗಿದೆ.

ನೀವುಗಳು ಸಹ ದೇವರ ವಿಶೇಷವಾದ ಕೆಲಸಕ್ಕಾಗಿ ಆಯ್ಕೆಗೊಂಡಿರುವಿರಿ ಎಂದು ನಾನು ನಿರೀಕ್ಷಿಸಿದ್ದೇನೆ. ಆ ಕೆಲಸವು ಒಂದು ದೊಡ್ಡ ಅಥವಾ ಮಹತ್ತಾದದ್ದಾಗಿರದೆ ಇರಬಹುದು - ಅದು ದೇವರ ಪಾತ್ರೆಯಲ್ಲಿರುವ ತಣ್ಣನೆಯ ನೀರಾಗಿರಬಹುದು (ಮಾರ್ಕ 9:41) - ಆದಾಗ್ಯೂ ಅದು ನಿನಗೆ ಮುಖ್ಯ ಕಾರ್ಯವಾಗಿರಬೇಕು. ದೇವರು *ನಿಮಗೆ* ನೇಮಿಸಿರುವ ಕಾರ್ಯವನ್ನು ಕಂಡುಹಿಡಿಯುವದು ಬಹು ವಿಶೇಷವಾದದ್ದು!

ದೇವರ ಸೇವೆಯ ಕಾರ್ಯವನ್ನು ಸಾಮಾನ್ಯವಾಗಿ ಗ್ರಹಿಸುವುದಾದರೆ, ಅದರಲ್ಲಿ "ಮಹತ್ವದ ಭವಿಷ್ಯದ" ಸುಮಧುರವಾದ ಭವಿಷ್ಯವಿದೆ (ಮತ್ತಾಯ 28:18-20; ದಾನಿಯೇಲ 12:3), ನಾವು ಈಗ ನಮ್ಮ ಪಾಠವನ್ನು ಮುಂದುವರಿಸಬೇಕಾಗಿದೆ. ಈ ಸೇವೆಯ ಕೆಲಸದಲ್ಲಿ ಕಹಿಯಾದ ಅನುಭವವೂ ಸಹ ಉಂಟಾಗುತ್ತದೆ.

## ಸೇವೆಯ ಕೆಲಸ: ಕಷ್ಟಿಯಾದದ್ದು (13:4-14)

ಬಾರ್ನಬ ಮತ್ತು ಸೌಲರು ತಮ್ಮೊಂದಿಗೆ "ಪರಿಚಾರಕನಾಗಿ" ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ಅವರ ಸಂಗಡ ಕರೆದೋಯ್ದರು (ವಚನ 5)[28] "ಹೀಗೆ ಅವರು ಪರಿಶುದ್ಧಾತ್ಮ ನಿಂದ ಕಳುಹಿಸಿಕೊಂಡವರಾಗಿ,[29] ಅವರು [ಹದಿನೈದು ಅಥವಾ ಹದಿನಾರು ಮೈಲುಗಳ ಪಶ್ಚಿಮಕ್ಕೆ ಪ್ರಯಾಣಿಸಿದರು] ಸೆಲ್ಯೂಕ್ಯಕ್ಕೆ ಬಂದರು [ಅದು ಅಂತಿಯೋಕ್ಯದ ಹಡಗು ನಿಲ್ದಾಣವಾಗಿತ್ತು][30] ಅಲ್ಲಿಂದ ಅವರು ಕುಪ್ರ ದ್ವೀಪಕ್ಕೆ ಸಮುದ್ರಯಾನ ಮಾಡಿದರು" (ವಚನ 4)[31] ಕುಪ್ರವು ಒಂದು ದೊಡ್ಡ ದ್ವೀಪವಾಗಿತ್ತು.[32] ಅದು ತಾಮ್ರದ ಅದಿರಿಗೂ, ಹಡಗುಗಳನ್ನು ಕಟ್ಟುವ ಕಾರ್ಖಾನೆಗೂ ಪ್ರಸಿದ್ಧವಾಗಿತ್ತು. ಅವರ ಗುಂಪಿನ ನಾಯಕನಾದ ಬಾರ್ನಬನು ಈ ಪ್ರದೇಶದವನಾಗಿದ್ದರಿಂದ, ಅದನ್ನು ಅವರು ತಮ್ಮ ಮುಖ್ಯಸ್ಥಾನವನ್ನಾಗಿ ಮಾಡಿಕೊಂಡರು (4:36). ಅಲ್ಲಿ ಅವನ ಕುಟುಂಬ ಹಾಗೂ ಸ್ನೇಹಿತರೊಂದಿಗೆ ಸುವಾರ್ತೆಯನ್ನು ಸಾರಲು ನಿರ್ಣಯಿಸಿದ್ದರು.[33] ಎಪ್ಪತ್ತು ಮೈಲುಗಳಷ್ಟು ಸಂಚರಿಸಿ ಆ ಪಟ್ಟಣವನ್ನು ಸೇರುವುದು ಕಷ್ಟಕರವಾಗಿರಲಿಲ್ಲ, ಆದರೆ ಅದು ಗುರುತರವಾದ ವಿಷಯವಾಗಿತ್ತು. ಅಂತಿಮವಾಗಿ ಸಭೆಯು "ಸುವಾರ್ತೆಗಾಗಿ" ಹೋಗು ಎಂಬ ತೀರ್ಮಾನವನ್ನು ಮಾಡಿದ್ದರು![34]

ಆ ಮೂವರು ಕುಪ್ರವನ್ನು ಸೇರಿದಾಗ, ಆ ಒಳ್ಳೆಯ ಅನುಭವವು ಅವರಲ್ಲಿ ಹೆಚ್ಚು ಕಾಲ ಉಳಿಯಲಿಲ್ಲ. ಅಲ್ಲಿ ಅವರು ಒಳ್ಳೆಯ ಸ್ನೇಹಿತರೊಂದಿಗೆ ಸೇರಿ: ಕರ್ತನ ಕೆಲಸವನ್ನು ಮಾಡುತ್ತಿದ್ದರು; ಮತ್ತು ಅವರು ಒಂದು ಸುಂದರವಾದ ಸ್ಥಳದಲ್ಲಿ ತಂಗಿದ್ದರು. ಆ ದ್ವೀಪವನ್ನು "ಮಕಾರಿಯ" ಎಂದು ಕರೆಯುತ್ತಿದ್ದರು, ಅದರ ಅರ್ಥ "ಸಂತೋಷದ ದ್ವೀಪ" ಕುಪ್ರಕ್ಕೆ ಹೋಗಿ ಸುವಾರ್ತೆ ಸಾರುವದನ್ನು ಹವಾಯಿಗೆ ಹೋಗಿ ಸುವಾರ್ತೆ ಸಾರುವದಕ್ಕೆ ಹೋಲಿಸ ಲಾಗಿದೆ.[35] ಆದರೆ, ಹೇಗೂ ಅವರು ಅಲ್ಲಿನ ಸುವಾರ್ತಾ ಸೇವೆಯಲ್ಲಿ ಅತಿ ಶೀಘ್ರವಾಗಿ ಕಹಿ ಅನುಭವವನ್ನು ಹೊಂದುವದಕ್ಕಿದ್ದರು.

## ಅಧೈರ್ಯ ಹಾಗೂ ಕುಗ್ಗುವಿಕೆ (ವಚನಗಳು 5, 6)

ಅವರೆಲ್ಲರೂ ಕುಪ್ರ ದ್ವೀಪದ ಪೂರ್ವ ದಿಕ್ಕಿನಲ್ಲಿದ ಪ್ರಧಾನ ಹಡಗು ತಾಣವಿದ್ದ ಸಲಾಮಿಸಿಗೆ ಸೇರಿದರು. ಅದು ವಾಣಿಜ್ಯ ಕೇಂದ್ರವಾಗಿತ್ತು. "ಅವರು ಸಲಾಮಿಗೆ ಸೇರಿದಾಗ ಯೆಹೂದ್ಯದ ಸಭಾ ಮಂದಿರಗಳಲ್ಲಿ ದೇವರ ವಾಕ್ಯವನ್ನು ಪ್ರಸಿದ್ಧಿ ಪಡಿಸಿದ್ದರು" (ವಚನ 5). ಕುಪ್ರದಲ್ಲಿ ಬಹಳಷ್ಟು ಯೆಹೂದ್ಯರು ವಾಸವಾಗಿದ್ದರು, ಆದ್ದರಿಂದ ಸಭಾಮಂದಿರಗಳು ಎಂದು ಬಹು ವಚನವನ್ನು ನೋಡುತ್ತೇವೆ. ಸೇವಾ ಪ್ರಯಾಣಗಳಲ್ಲಿ ಮೊದಲಿಗೆ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು ಸಾರುವ ರೂಢಿಯನ್ನು ಮಾಡಿಕೊಂಡಿದ್ದರು. ಇದರಿಂದ ಯೆಹೂದ್ಯರು ಸುವಾರ್ತೆಯನ್ನು ಕೇಳುವ ಮೊದಲ ಅವಕಾಶವನ್ನು ಪಡೆಯುತ್ತಿದ್ದರು (ರೋಮಾಪುರ 1:16). ಹಾಗೂ ಅನ್ಯರು ಸಹ ದೇವರೊಂದಿಗಿನ ಸಂಪರ್ಕವನ್ನು ಹೊಂದಬಹುದೆಂಬ ಅಂಶವನ್ನು ಸ್ಪಷ್ಟಪಡಿಸಿದರು.

ಅವರು "ದ್ವೀಪದಲ್ಲೆಲ್ಲಾ" ಸಂಚಾರ ಮಾಡಿ ಪಾಫೋಸ್ ಎಂಬ ಊರಿನ ತನಕ ಬಂದರು (ವಚನ 6) - ಸುಮಾರು ತೊಂಬತ್ತಕ್ಕಿಂತಲೂ, ಅಧಿಕ ಮೈಲುಗಳನ್ನು ಸಂಚರಿಸಿ - ಮಾರ್ಗಮಧ್ಯದಲ್ಲಿದ್ದ ಅನೇಕ ಪಟ್ಟಣಗಳಿಗೆ ಸುವಾರ್ತೆಯ ಬೋಧನೆಯನ್ನು ಮಾಡಿದರು. ಆದಿಯಲ್ಲಿ ಇವರು ಏನು ಮಾಡಿದರು ಎಂಬುದಾಗಿ ಅರಿಯುವದಕ್ಕಿಂತಲೂ, ಲೂಕನು ಇದರ ಕುರಿತು ಏನನ್ನು ತಿಳಿಸಲಿಲ್ಲ ಎಂಬುದನ್ನು ಅರಿಯಬೇಕಿದೆ. ಅವರು ಸಾರಿದ ಸುವಾರ್ತೆಗೆ ಯಾವ ಪ್ರತಿಕ್ರಿಯೆಯು ಉಂಟಾಗಲಿಲ್ಲ ಎಂದು ನೋಡುತ್ತೇವೆ. ನಾನು ಆಸ್ಟ್ರೇ ಲಿಯದ ಸಿಡ್ನಿಯಲ್ಲಿದ್ದ ಸಮಯವನ್ನು ನೆನಪುಮಾಡಿಕೊಳ್ಳುತ್ತೇನೆ. ಕುಪ್ರವು "ಸಂತೋಷದ ದ್ವೀಪವಾಗಿತ್ತು" ಆಸ್ಟ್ರೇಲಿಯವನ್ನು "ಅದೃಷ್ಟದ ದೇಶ" ಎಂದು ಕರೆಯುತ್ತಾರೆ. ಈ ಎರಡು ದ್ವೀಪಗಳು, ಸ್ವಾಭಾವಿಕವಾದ ಹಾಗು ಸುಂದರವಾದ ಸೊಬಗನ್ನು ಹೊಂದಿರುತ್ತವೆ -

ಆದಾಗ್ಯೂ ಸುವಾರ್ತೆಗೆ ಪ್ರತಿಕ್ರಿಯೆಯಿಲ್ಲದ ಸ್ಥಳವಾಗಿದೆ. ಒಬ್ಬ ಆಸ್ಟ್ರೇಲಿಯದವನು ನನಗೆ ಹೇಳಿರುವಂತೆ, "ನಮಗೆ ಸಾಕಷ್ಟು ಸೂರ್ಯನ ಬೆಳಕು, ಉತ್ತಮವಾದ ವಸ್ತುಗಳು ಹಾಗು ಸಾಮಾಜಿಕ ಸುರಕ್ಷೆ ಹೊಂದಿರುವದರಿಂದ" ನಮಗೆ ದೇವರ ಅಗತ್ಯತೆ ಏಕೆ? ಎಂದು ಹೇಳಿದನು. ಯಥಾರ್ಥವಾದ, ಆತ್ಮಗಳನ್ನು ಹುಡುಕುವದಕ್ಕೆ ನಾವು ಸಮಯ ತೆಗೆದುಕೊಳ್ಳಬೇಕಾಯಿತು. ನಮ್ಮ ಸೇವಾ ಅವಧಿಯಲ್ಲಿ ಸೇವೆಯಲ್ಲೂ ಹಾಗೂ ದೇವರಲ್ಲೂ ನಾವುಗಳು ಇಟ್ಟಿರುವ ಭರವಸೆಯಲ್ಲಿ ಮುಂದುವರಿಯಬೇಕಾಯಿತು, ಅದರಲ್ಲಿ ಬಹಳಷ್ಟು ದಿನಗಳು, ವಾರಗಳು, ಮತ್ತು ತಿಂಗಳುಗಳನ್ನೇ ಕಳೆಯಬೇಕಾಯಿತು.

**ಮಾನನಷ್ಟ ಹಾಗೂ ವಂಚನೆ (ವಚನಗಳು 6-12)**

ಕೊನೆಗೂ ಬಾರ್ನಬ ಸೌಲ, ಹಾಗೂ ಯೋಹಾನರು ದ್ವೀಪದಲ್ಲೆಲ್ಲಾ ಸಂಚಾರ ಮಾಡಿ ಪಾಫೋಸ್ ಎಂಬ ಹಡಗು ನಿಲ್ದಾಣಕ್ಕೆ ಬಂದರು. ಅದು ದ್ವೀಪದ ಪಶ್ಚಿಮ ದಿಕ್ಕಿನಲ್ಲಿತ್ತು. ಪಾಫೋಸ್ ಪಟ್ಟಣವು ಕುಪ್ರದ ರಾಜಧಾನಿಯಾಗಿದ್ದಿತ್ತು, ಅಲ್ಲಿ ಸಾಮ್ರಾಜ್ಯ ಶಾಯಿಗಳ ಅಧಿಕಾರವಿತ್ತು.

> ಅವರು ದ್ವೀಪದಲ್ಲೆಲ್ಲಾ ಸಂಚಾರಮಾಡಿ ಪಾಫೋಸ್ ಎಂಬ ಊರಿನ ತನಕ ಬಂದು[36] ಅಲ್ಲಿ ಸುಳ್ಳು ಪ್ರವಾದಿಯೂ ಮಂತ್ರವಾದಿಯೂ[37] ಆಗಿದ್ದ ಬಾರ್‌ಯೇಸು ಎಂಬ ಒಬ್ಬ ಯೆಹೂದ್ಯ ಮನುಷ್ಯನನ್ನು ಕಂಡರು. ಅವನು ಬುದ್ಧಿವಂತನಾಗಿದ್ದ ಸೆರ್ಗ್ಯಪೌಲನೆಂಬ ಅಧಿಪತಿಯ ಹತ್ತರದಲ್ಲಿದ್ದನು[38] (ವಚನಗಳು 6, 7ಎ).

ಲೂಕನು, ಅವರು "ಬುದ್ಧಿವಂತನಾದ ಅಧಿಕಾರಿಯನ್ನು ಮತ್ತು ಅವನ ಸಲಹೆಗಾರನಾದ ಬಾರ್ ಯೇಸುವನ್ನು" ಸಂಧಿಸಿದರು ಎಂದು ತಿಳಿಸುತ್ತಿರುವದಿಲ್ಲ, "ರೋಮಾ ಸಾಮ್ರಾಜ್ಯದ ಒಬ್ಬ ಸಲಹೆಗಾರನ ಪರಿವರ್ತನೆಯ ಕುರಿತು ಪ್ರಸ್ತಾಪವಲ್ಲ" ಒಬ್ಬ ಸೈತಾನನ ಅನುಯಾಯಿಯನ್ನು ಎದುರಿಸಿದ ಸನ್ನಿವೇಶವಾಗಿದೆ.

ಬುದ್ಧಿವಂತನಾಗಿದ್ದ, ಸೆರ್ಗ್ಯೆ ಪೌಲನೆಂಬ ಅಧಿಪತಿಯು, ಒಬ್ಬ ಮಂತ್ರವಾದಿಯನ್ನು ತನ್ನ ಸಲಹೆಗಾರನನ್ನಾಗಿ ಮಾಡಿಕೊಂಡಿರುವದು ನಮಗೆ ಆಶ್ಚರ್ಯವುಂಟುಮಾಡುತ್ತದೆ, ಆದರೆ ಅದು ಮಂತ್ರಗಳ ದಿವಸಗಳಾಗಿದ್ದವು. ಆ ದಿವಸಗಳಲ್ಲಿ ಕೆಲವರು ಖಾಸಗಿಯಾದ ಭವಿಷ್ಯಗಾರರನ್ನು ಹೊಂದಿದ್ದರು, ಅವರು ಮಂತ್ರ ಶಕ್ತಿಯಿಂದ ಭವಿಷ್ಯವನ್ನು ಹೇಳುತ್ತಿದ್ದರು. ಆದಾಗ್ಯೂ, ಸೆರ್ಗ್ಯೆ ಪೌಲನು ತೆರೆದ ಮನಸ್ಸುಳ್ಳವನಾಗಿದ್ದನು. ಅವನು ಬಾರ್ನಬ ಪೌಲರಿಂದ ಸುವಾರ್ತೆಯನ್ನು ಕೇಳಿದನು, ಮತ್ತು ಅವರನ್ನು ಬರಹೇಳಿದನು. "ಮತ್ತು ದೇವರ ವಾಕ್ಯವನ್ನು ಕೇಳುವದಕ್ಕೆ ಅಪೇಕ್ಷಿಸಿದನು" (ವಚನ 7ಬಿ).

ಸೆರ್ಗ್ಯೆ ಪೌಲನು ಯೇಸುವಿನ ಸುವಾರ್ತೆಯನ್ನು ಕೇಳಿದನು ಎಂದು ಬಾರ್ ಯೇಸು ತಿಳಿದನು, ಈಗ ಅವನ ವರ್ಚಸ್ಸಿಗೆ ಧಕ್ಕೆ ಉಂಟಾಯಿತು. ಆದ್ದರಿಂದ, ಬಾರ್ನಬ ಸೌಲರು ಮಾತನಾಡುವಾಗ, ಅವರ ಮಾತಿನ ಮಧ್ಯ ಪ್ರವೇಶಿಸಲು ಯತ್ನಿಸುತ್ತಿದ್ದನು, ಮತ್ತು ಅವರನ್ನು ಅವರ ಸಂದೇಶವನ್ನು ಅವಮಾನಿಸುತ್ತಿದ್ದನು. "ಆದರೆ ಮಂತ್ರವಾದಿಯಾದ ಎಲುಮನು (ಹೆಸರಿನ ತರ್ಜುಮೆ[39]) ಅವರಿಗೆ ವಿರೋಧವಾದನು,[40] ಅಧಿಪತಿಯು ಕ್ರಿಸ್ತನನ್ನು ನಂಬದ ಹಾಗೆ ಪ್ರಯತ್ನಿಸಿದನು" (ವಚನ 8). ಬಾರ್ನಬ ಸೌಲರನ್ನು ಸೈತಾನನು ತನ್ನ ಅಧೈರ್ಯ ಹಾಗೂ, ತಿರಸ್ಕಾರ, ಮಾನನಷ್ಟ ಮತ್ತು ಕುಗ್ಗುವಿಕೆ ಮೂಲಕ ಅವರನ್ನು ಅಧೈರ್ಯಗೊಳಿಸುವ ಸೈತಾನನ ಪ್ರಯತ್ನವು ಯಶಸ್ವಿಯಾಗಿಲಿಲ್ಲ.

ಬೆಳಕಿನ ಕರ್ತನಿಗೆ ಕತ್ತಲೆಯ ಅರಸನು ಸವಾಲನು ಹಾಕಿದನು - ಆ ಸವಾಲಿಗೆ, ಪೌಲನು ಉತ್ತರವನ್ನು ನೀಡದೆ ಇರಲಿಲ್ಲ:

> ಆಗ ಪೌಲನೆಸಿಕೊಳ್ಳುವ ಸೌಲನು ಪವಿತ್ರಾತ್ಮಭರಿತನಾಗಿ[41] ಅವನನ್ನು ದೃಷ್ಟಿಸಿನೋಡಿ - ಎಲೋ, ಎಲ್ಲಾ ಮೋಸದಿಂದಲೂ ಎಲ್ಲಾ ಕೆಟ್ಟತನದಿಂದಲೂ ತುಂಬಿರುವನೇ,[42] ಸೈತಾನನ ಮಗನೇ, ಎಲ್ಲಾ ನೀತಿಗೂ ವಿರೋಧಿಯೇ, ನೀನು ಕರ್ತನ ನೀಟಾದ ಮಾರ್ಗಗಳನ್ನು ಡೊಂಕುಮಾಡುವದನ್ನು ಬಿಡುವದಿಲ್ಲವೋ? (ವಚನಗಳು 9, 10).

ಹೊಸ ಒಡಂಬಡಿಕೆಯಲ್ಲಿನ ಎಲ್ಲಾ ಪದಗಳಲ್ಲಿಯೂ ಪೌಲನ ಈ ಬಲವಾದ ಪದವು ಎದ್ದು ಕಾಣುತ್ತದೆ.[43] "ಬಾರ್-ಯೇಸು" ಎಂಬುದರ ಅಕ್ಷರಶಃ ಅರ್ಥ "ಯೇಸುವಿನ ಮಗನು" ("ಯೇಹೋಶುವ")[44] ಅದರ ಪರಿಣಾಮವಾಗಿ ಸೌಲನು, "ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದೀರಿ." (ನೋಡಿರಿ ಯೋಹಾನ 8:44.) NIVಯಲ್ಲಿ "ನೀವು ಸೈತಾನನ ಮಕ್ಕಳು ನೀತಿ ಕಾರ್ಯಗಳಿಗೆ, ನೀವು ವೈರಿಗಳು!" ಎಂಬುದಾಗಿದೆ.

ಸೌಲನು ಅವನನ್ನು ಶಪಿಸಿದನು: "ಇಗೋ, ಕರ್ತನು ನಿನ್ನ ಮೇಲೆ ಕೈ ಎತ್ತಿದ್ದಾನೆ; ನೀನು ಕುರುಡನಾಗಿ ಕೆಲವು ಕಾಲ ಸೂರ್ಯನ್ನು ಕಾಣದೆ ಇರುವಿ ಎಂದು ಹೇಳಿದನು" (ವಚನ 11ಎ). 11ಬಿ ಯಲ್ಲಿ, ಆ ಕ್ಷಣವೇ ಅವನಿಗೆ ಕಣ್ಣು ಮೊಬ್ಬಾಗಿ ಕತ್ತಲೆ ಉಂಟಾಯಿತು;[45] ಅವನು ಕೈ ಹಿಡಿಯುವವರನ್ನು ಹುಡುಕುತ್ತಾ ತಿರುಗಾಡಿದನು ಎಂದು ಓದುತ್ತೇವೆ. "ಇನ್ನೊಬ್ಬ ವ್ಯಕ್ತಿಯ ಮೇಲೆ ಇದೇ ಮೊದಲ ಬಾರಿಗೆ ಅಪೊಸ್ತಲನು ಶಾಪವನ್ನು ಹಾಕಿದನು."[46] ಆದರೆ, ಪೌಲನು ಕೇವಲ ದೇವರ ರಾಯಬಾರಿ ಯಾಗಿದ್ದನಷ್ಟೆ; ಆದ್ದರಿಂದ, ಆ ಮಂತ್ರವಾದಿಗೆ "*ಕರ್ತನು* ನಿನ್ನ ಮೇಲೆ ಕೈ ಎತ್ತಿದ್ದಾನೆ" ಎಂದು ಸರಳವಾಗಿ ಹೇಳಿದನು (ಒತ್ತಿ ಹೇಳಿದ್ದು ನನ್ನದು). ಈ ಸಂದರ್ಭದಲ್ಲಿ, ದೇವರು ಏಕೆ ಈ ವಿಧವಾದ ಕಾರ್ಯವನ್ನು ಪ್ರಾಯೋಗಿಸಿದನು? ಸರ್. ವಿಲಿಯಮ್ ರಾಮ್ಸೆರವರು, ರೋಮಾಯದಲ್ಲಿ ಅತಿ ವರ್ಚಸ್ಸನ್ನು ಹೊಂದಿದ್ದ ಮಂತ್ರ ಶಕ್ತಿಯ "ಬಾರ್-ಯೇಸು ಎಂಬುವನು ಅದರ ರಾಯಬಾರಿಯಾಗಿದ್ದನು, ಆ ಶಕ್ತಿಯನ್ನು ನಾಶಪಡಿಸ ಬೇಕಿತ್ತು, ಅದನ್ನು ಕ್ರೈಸ್ತರೇ ನಿರ್ನಾಮ ಮಾಡಬೇಕಿತ್ತು, ಇಲ್ಲವಾದರೆ ಅದು ಆ ಸಾಮ್ರಾಜ್ಯವನ್ನೇ ಆಡಳಿತ ಮಾಡಲು ಸಾಧ್ಯವಿತ್ತು."[47] ಒಳ್ಳೇದರ ಮತ್ತು ಕೆಟ್ಟದ್ದರ ನಡುವೆ ಒಂದು ಸವಾಲು ಉಂಟಾಗಿತ್ತು.[48]

"ನೀನು ಕುರುಡನಾಗಿ *ಕೆಲವು ಕಾಲ* ಸೂರ್ಯನನ್ನು ಕಾಣದೆ ಇರುವಿ" ಎಂಬ ವ್ಯಾಖ್ಯಾನವನ್ನು ಗಮನಿಸಿರಿ (ವಚನ 11ಎ; ಒತ್ತಿ ಹೇಳಿದ್ದು ನನ್ನದು). ಬಾರ್ - ಯೇಸುವಿನ ಪರಿಸ್ಥಿತಿಯು ಸ್ಥಿರವಾಗಿರಲಿಲ್ಲ. ಅವನು ಪುನಃ ದೃಷ್ಟಿಯನ್ನು ಹಿಂಪಡೆಯಲು ಸಾಧ್ಯವಿತ್ತು: ಅವನು ತಿರುಗಿ ನೋಡುವವನಾಗಿದ್ದನು ದಮಸ್ಕದ ದಾರಿಯಲ್ಲಿ ಸೌಲನು ಸಹ ಕುರುಡನಾಗಿ, ಮಾನಸಾಂತರ ಪಡೆಯಲು ಅಲ್ಪ ಸಮಯವನ್ನು ತೆಗೆದುಕೊಂಡ ಹಾಗೆ, ಇವನಿಗೂ ಸಹ ಮಾನಸಾಂತರ ಪಡಲು ಸಮಯವನ್ನು ನೀಡಲಾಗಿತ್ತು.[49]

ಆ ಅದ್ಭುತವು ಅಸಹಜವಾಗಿದ್ದರೂ, ಅದರ ಪರಿಣಾಮವು ಅಸಹಜವಾಗಿರಲಿಲ್ಲ: "ಅಧಿಪತಿಯು ಆ ಸಂಗತಿಯನ್ನು ನೋಡಿ ಕರ್ತನ ಬೋಧನೆಗೆ ಅತ್ಯಾಶ್ಚರ್ಯಪಟ್ಟು ನಂಬುವವನಾದನು" (ವಚನ 12) ಅಧಿಕಾರಿಗಳು ಅದ್ಭುತವನ್ನು ನೋಡಿ ಆಶ್ಚರ್ಯಪಡದೆ "ಕರ್ತನ ವಾಕ್ಯವನ್ನು ಕೇಳಿ ಆಶ್ಚರ್ಯಪಟ್ಟರು." ಆ ಸುವಾರ್ತೆಯು, ದೇವರ ಬಲಸ್ವರೂಪ ವಾಗಿದೆ (ರೋಮಾಪುರ 1:16). ಆ ಅಧಿಕಾರಿಯು ಕ್ರೈಸ್ತನಾದನೇ? ಬಹುಶಃ ಆಗಿರಬಹುದು; ಪರಿವರ್ತನೆಯ ಹಾಗೂ ದೀಕ್ಷಾಸ್ನಾನದ ಸಂಪೂರ್ಣ ಪ್ರಗತಿಯ ಕುರಿತು "ನಂಬಿಕೆ" ಎಂಬ ಪದವನ್ನು ಅಪೊಸ್ತಲರಕೃತ್ಯದಲ್ಲಿ ತಿಳಿಸಲಾಗಿದೆ.[50] ಲೂಕನ ಹೇಳಿಕೆಯಂತೆ, ಈ ಸಂದರ್ಭದಲ್ಲಿ ಸೈತಾನನ ಶಕ್ತಿಯನ್ನು ಎದುರಿಸಿ - ಮತ್ತು ಜಯಿಸುವ ಸಾಧ್ಯತೆಯನ್ನು ತೋರಿ ಸಲಾಗಿದೆ!

ಸೈತಾನನು ಯಾವಾಗಲೂ ಕರ್ತನ ಸೇವೆಯ ಕೆಲಸವನ್ನು ಎದುರಿಸುತ್ತಾನೆ. ಸೈತಾನನು ಸತ್ಯದ ಮುಂದೆ ನಿಲ್ಲಲಾರನು. ಇತ್ತೀಚೆಗಷ್ಟೆ, ಪೂರ್ವ ಐರೋಪ್ಯ ದೇಶದಲ್ಲಿ,

ಸತ್ಯವೇದಗಳನ್ನು ಹಂಚಿದಾಗ, ಆ ಸತ್ಯವೇದಗಳು ತೀವ್ರವಾದಿಗಳ ಸತ್ಯವೇದ ಎಂದು ಸುಳ್ಳು ಪ್ರಚಾರ ಮಾಡಲಾಯಿತು. ಅದು ನಿಜವಾದ ಸತ್ಯವೇದವಲ್ಲ, ಅವುಗಳನ್ನು ಎಸೆದು ಬಿಡಬೇಕೆಂದು ತಿಳಿಸಲಾಯಿತು. ನೀವು ವಾಕ್ಯವನ್ನು ಸಾರುವಾಗ, ಈ ರೀತಿಯಾದ ವಂಚನೆಗಳ ಮಾತುಗಳು, ಹಾಗೂ ನಿಮ್ಮನ್ನು ಕೀಳುಮಟ್ಟಕ್ಕೆ ಇಳಿಸುವ ಕಾರ್ಯವು ಉಂಟಾಗುತ್ತದೆ.

**ಪರಿತ್ಯಾಗ ಹಾಗೂ ಆಶಾಭಂಗ (ವಚನ 13)**

ಮಂತ್ರ ಶಕ್ತಿಯ ಕುರಿತು ಲೂಕನು ಬರೆದು: *"ಸೌಲನೆನಿಸಿಕೊಳ್ಳುವ ಪೌಲನು"* (ವಚನ 9; ಒತ್ತಿ ಹೇಳಿದ್ದು ನನ್ನದು). ಆ ದಿವಸಗಳ ಪದ್ಧತಿಯಂತೆ, ಸೌಲನಿಗೂ ಇನ್ನೊಂದು ಹೆಸರು ಇತ್ತು. ಸೌಲನೆಂಬ ಇಬ್ರಿಯ ಹೆಸರಿನ ಸಂಗಡ ಪೌಲನೆಂಬ ರೋಮಾಯದ ಹೆಸರನ್ನು ಹೊಂದಿದ್ದನು.[51] ಇಲ್ಲಿಯವರೆಗೂ ಲೂಕನು ಇಬ್ರಿಯ ಹೆಸರನ್ನು ಪ್ರಯೋಗಿಸಿ: ಇಲ್ಲಿಂದ ಮುಂದೆ ಲೂಕನು ರೋಮಾಯದ ಹೆಸರನ್ನು ನಮೂದಿಸಿರುವನು.[52] ನಾಮಾಂಕಿತದ ಬದಲಾವಣೆಯ ಗುರುತರವಾಗಿದೆ (ಅವನ ಪತ್ರಿಕೆಯ ಪರಿಚಯಕ್ಕಾಗಿ ರೋಮಾಯದ ಹೆಸರನ್ನು ಬಳಸಿರುವನು). ರೋಮಾಯ ಅಧಿಕಾರಿಗೂ ಮತ್ತು ಅಪೊಸ್ತಲನ ನಡುವೆ ಇರುವ ಸಂಬಂಧವನ್ನು ಕೆಲವರು ಗಮನಿಸುತ್ತಾರೆ ಆದರೆ ಅದು ಕಾಕತಾಳೀಯವಲ್ಲ. ಲೂಕನು ಪೌಲನ ಇಬ್ರಿಯ ಹೆಸರಿಗೆ ಬದಲಾಗಿ ಅನ್ಯರ ಹೆಸರನ್ನು ದಾಖಲು ಮಾಡಿ, ಈಗ ಅನ್ಯರ ಮಧ್ಯದಲ್ಲಿ ಪೌಲನ ಸೇವೆ ಆರಂಭವಾಯಿತು ಎಂದು ಸಾಧಿಸಿರುವನು. ಅಂದಿನಿಂದ ಅವನು ಅನ್ಯರಿಗೆ ಸುವಾರ್ತೆಯನ್ನು ಸಾರುವದರಿಂದ ಹಿಂಜರಿಯಲಿಲ್ಲ!

ಅವರು ಪಾಫೋಸನಲ್ಲಿ ದೇವರ ಕೆಲಸವನ್ನು ಮುಗಿಸಿದ ನಂತರ, ಒಂದು ಗುರುತರವಾದ ಬದಲಾವಣೆಯುಂಟಾಯಿತು. ವಚನ 13ರಲ್ಲಿ ತರುವಾಯ "*ಪೌಲನೂ ಅವನ ಜೊತೆಯಲ್ಲಿದ್ದವರೂ* ಪಾಫೋಸ ಊರನ್ನು ಬಿಟ್ಟು ಸಮುದ್ರ ಪ್ರಯಾಣ ಮಾಡಿದರು." (ಒತ್ತಿ ಹೇಳಿದ್ದು ನನ್ನದು.) ಇದುವರೆಗೂ, ಮೊದಲ ಸ್ಥಾನದಲ್ಲಿ ಬಾರ್ನಬನನ್ನು ಹೆಸರಿಸುತ್ತಿದ್ದರು; ಈ ಅಂಶದಿಂದ ಮುಂದಕ್ಕೆ, ಮೊದಲಿಗೆ ಪೌಲನ ಹೆಸರನ್ನು ಹೆಸರಿಸಲಾಗಿದೆ.[53] ಆ ಚಿಕ್ಕ ಗುಂಪಿಗೆ ಪೌಲನೇ ಗಮನಾರ್ಹವಾದ ನಾಯಕನಾದನು.[54]

ಈ ಮೂವರು ಉತ್ತರದ ಪಾಫೋಸನಿಂದ 150 ಮೈಲುಗಳಷ್ಟು ಸಮುದ್ರ ಪ್ರಯಾಣ ಮಾಡಿ ಆಸ್ಯ ಸೀಮೆಗೆ ಬಂದರು. ಪ್ರಾಯಶಃ ಅಥಾಲ್ಯಕ್ಕೆ ಬಂದು ಏಳು ಮೈಲುಗಳ ದೂರದಲ್ಲಿದ್ದ ಪೆರ್ಗೆಗೆ ಹೋದರು (14:25) ಅದು ಪಂಫುಲ್ಯದ ರಾಜಧಾನಿಯಾಗಿತ್ತು. ಅವರು ಪೆರ್ಗೆಗೆ ಬಂದಾಗ ಅವರ ಗುಂಪಿನಲ್ಲಿ ಮುಖ್ಯವಾದ ಬದಲವಣೆ ಉಂಟಾಗಿ ಮೂರರಲ್ಲಿ ಒಂದಷ್ಟು ಜನರು ಅವರನ್ನು ಬಿಟ್ಟುಹೋದರು. "ಯೋಹಾನನು ಅವರನ್ನು ಬಿಟ್ಟು ಹಿಂತಿರುಗಿ ಯೆರೂಸಲೇಮಿಗೆ ಹೋದನು" (13:13ಬಿ).

ಮಾರ್ಕನೆನಿಸಿಕೊಳ್ಳುವ ಯೋಹಾನನು ಬಿಟ್ಟು ಹೋದ ಕಾರಣವನ್ನು ತಿಳಿದಿರುವದಿಲ್ಲ. ಒಂದು ವೇಳೆ ಅವನಿಗೆ ಅನಾರೋಗ್ಯವಿರಬಹುದು[55] ಹಾಗೂ ಸೇವೆಯ ಕೆಲಸವು ಆಕರ್ಷಣೀಯ ಅನುಭವವನ್ನು ನೀಡದೆ, ಕಷ್ಟಕರವಾಗಿರಬಹುದು. ಆ ದಾರಿಯು ಕಷ್ಟಕರವಾದದ್ದೆಂದು ತಿಳಿದಿರಬಹುದು. ಒಂದು ವೇಳೆ ಬಾರ್ನಬನಿಗೆ ಬದಲಾಗಿ, ಪೌಲನು ನಾಯಕನಾದದ್ದರಿಂದ ಅವನು ಅವರನ್ನು ತೊರೆದಿರಬಹುದು. ಮಾರ್ಕನೆನಿಸಿಕೊಳ್ಳುವ ಯೋಹಾನನ ಕಾರಣಗಳು ಏನೇ ಇರಬಹುದು, ಅವನ ನಿರ್ಧಾರವು ಪೌಲನಿಗೆ ಗಂಭೀರವಾದ ಅಡಚಣೆ ಉಂಟುಮಾಡಿತು (15:38, 39). ಯೋಹಾನನು *ಬಿಟ್ಟು ಹೋದನೆಂದು* ಲೂಕನು ತಿಳಿಸಿರವನು (13:13; KJV); ಅವನು *ತೊರೆದುಹೋದನು* ಎಂದು ಪೌಲನು ಹೇಳಿರುವನು (15:38).

ನಾನು ಮಾಡಿದ ಸೇವಾ ಅವಧಿಯಲ್ಲಿ ಸೇವೆಯನ್ನು ತೊರೆದು ಹೋದ ಅಧೈರ್ಯಗೊಂಡ ಹಾಗೂ ದೂರದೃಷ್ಟಿಯಿಲ್ಲದ ಸೇವಕರುಗಳನ್ನು ನೋಡಿದ್ದೇನೆ, ಅವರು ಸಾಮಾನ್ಯವಾಗಿ ನಿರಾಶೆಗೊಂಡು, ಅಧೈರ್ಯಗೊಂಡು ತಮ್ಮ ಸೇವಾ ಸ್ಥಳಗಳನ್ನು ಬಿಟ್ಟು ಹೋದರು.[56] ಇದು

ದೇವರ ಕೆಲಸದಲ್ಲಿ ಉಂಟಾಗುವ ಕಹಿ ಭಾಗವಾಗಿರುತ್ತದೆ. ನಾವು ಪ್ರತಿಯೊಬ್ಬರು ಗ್ರಹಿಸಬೇಕಾದ ಅಂಶವೇನೆಂದರೇ ನಮಗೆ ವಾಗ್ದಾನ ಮಾಡಿದಾತನು ನಮ್ಮನೆಂದಿಗೂ *ತೊರೆಯುವದಿಲ್ಲ* (ಇಬ್ರಿಯ 13:5).

**ಅಪಾಯ ಮತ್ತು ಅನಾರೋಗ್ಯ (ವಚನ 14)**

ಪೌಲ ಬಾರ್ನಬರು ಭಾರವಾದ ಹೃದಯವುಳ್ಳವರಾಗಿದ್ದರು ಸೇವೆಯಲ್ಲಿ ಹಿಂಜರಿಯಲಿಲ್ಲ. ಅವರು ಒಳಪ್ರದೇಶವಾದ ಅಂತಿಯೋಕ್ಯದ ಪಿಸಿದ್ಯ ಸೀಮೆಗೆ ಬಂದರು. ಆ ಪಟ್ಟಣವು ರೋಮಾಯದ ಗಲಾತ್ಯ ಪ್ರದೇಶದಲ್ಲಿತ್ತು.[57] ಆ ಸ್ಥಳವನ್ನು ಸೇರಲು ಅವರುಗಳು ಪ್ರಪಂಚದ ಅತಿ ಭಯಂಕರವಾದ ಮಾರ್ಗವನ್ನು ಹಾದು ಹೋಗ ಬೇಕಾಗಿತ್ತು.[58] ಅಲ್ಲಿಂದ ಅಂತಿಯೋಕ್ಯವು 100 ಮೈಲುಗಳ ಅಂತರದಲ್ಲಿದ್ದು ಮತ್ತು 3500 ಅಡಿಗಳ ಎತ್ತರದಲ್ಲಿತ್ತು. ಪೌಲ ಬಾರ್ನಬರು ಆ ದುರ್ಗಮ ಬೆಟ್ಟದ ದಾರಿಯಲ್ಲಿರುವ ಪೈನ ಮರಗಳ ಕಾಡನ್ನು[59] ವನ್ಯಮೃಗಗಳನ್ನು ಮತ್ತು ಕಾಡುಗಳ್ಳರನ್ನು ಹಾದು ಹೋಗಬೇಕಾಗಿತ್ತು ಅಲೆಕ್ಸಾಂಡರ ಮಹಾ ಚಕ್ರವರ್ತಿಯು ತಾನು ಪ್ರಪಂಚವನ್ನು ಗೆಲ್ಲಲು ಹಾದು ಹೋದ ಮಾರ್ಗಗಳ ಕುರಿತು ಬರೆಯುವಾಗ, "ಪಂಫುಲ್ಯ ದೇಶ ಹಾಗೂ ಅದರ ಜನರು ಬಹು ಕಠೋರವಾಗಿದ್ದರು" ಎಂದು ಬರೆದಿರುವನು.[60]

ಹೇಗೂ ಈ ಅಪಾಯಗಳು ಪೌಲನಿಗೆ ಅಲ್ಪವಾಗಿದ್ದವು. ನಂತರ ಪೌಲನು ಪಿಸಿದ್ಯದಲ್ಲಿದ್ದ ಅಂತಿಯೋಕ್ಯ ಸಭೆಗೆ ಬರೆಯುವಾಗ (ಇತರ ಸಭೆಗಳನ್ನು ಅವನು ಅಲ್ಲಿ ಸ್ಥಾಪಿಸಿದ್ದನು).[61] ಆ ಪತ್ರದಲ್ಲಿ ಅವನು "*ನನ್ನ ಶರೀರಕ್ಕೆ ಅಸೌಖ್ಯವಿದ್ದದ್ದರಿಂದ* ನಾನು ನಿಮ್ಮಲ್ಲಿದ್ದು ಮೊದಲನೆ ಸರ್ತಿ ನಿಮಗೆ ಸುವಾರ್ತೆ ಸಾರಿದ್ದನ್ನು ನೀವು ಬಲ್ಲಿರಿ" (ಗಲಾತ್ಯ 4:13; ಒತ್ತಿ ಹೇಳಿದ್ದು ನನ್ನದು). ಪೆರ್ಗೆಯಲ್ಲಿ ಅವನು ಉಳಿಯದೆ ಇರುವಂಹ ಕಾರಣವನ್ನು ನೀಡಿ ಅವನಿಗೆ ದೈಹಿಕವಾದ ಸಮಸ್ಯೆಯಿದ್ದದ್ದರಿಂದ ಅಂತಿಯೋಕ್ಯಕ್ಕೆ ಮುಂದಾದನು[62] ಎಂದು ತಿಳಿಸಿರುವನು. ಪಂಫುಲ್ಯವು ತಳಭಾಗದ ಪ್ರದೇಶವು ಔಗು ಪ್ರದೇಶವು ಮತ್ತು ಒದ್ದೆಯಾದ ಪ್ರದೇಶವಾಗಿದ್ದರಿಂದ (ಸೊಳ್ಳೆಗಳ ನಿಮಿತ್ತ)[63] ಅವನು ಮಲೇರಿಯಾ ರೋಗಕ್ಕೆ ತುತ್ತಾಗಿರಬಹುದೆಂಬ ಅಭಿಪ್ರಾಯವಿದೆ ಆದ್ದರಿಂದ ಅವನು ಆದಷ್ಟು ಬೇಗನೇ ಎತ್ತರವಾದ ಹಾಗೂ ತಣ್ಣಗಿರುವ ಅಂತಿಯೋಕ್ಯದ ಸಮತಟ್ಟಾದ ಸ್ಥಳಕ್ಕೆ ಹೋಗಲು ನಿರ್ಧರಿಸಿದನು. ಇದು ಸತ್ಯ ಇರಬಹುದು ಅಥವಾ ಇಲ್ಲದೆ ಇರಬಹುದು, ಪೌಲನು ಮಾತ್ರ ಮರಣಕರವಾದ ರೋಗಕ್ಕೆ ತುತ್ತಾಗಿದ್ದನು. ಅಥವಾ ಅಂತಿಯೋಕ್ಯದ ಪ್ರಯಾಣದಲ್ಲಿ ಬಳಲಿರಬಹುದು. "ಮಾರ್ಕನು ಹಿಂದಕ್ಕೆ ಹೋದದ್ದು ಅದ್ಭುತವಲ್ಲ; ಪೌಲನು ಮುಂದುವರಿದದ್ದೆ ಅದ್ಭುತವು."[64]

ಪೌಲ ಬಾರ್ನಬರು ಹಿಂಜರಿಯಲಿಲ್ಲ. "ಆಮೇಲೆ ಅವರು ಪೆರ್ಗೆಯಿಂದ ಸಂಚಾರ ಮಾಡಿ ಪಿಸಿದ್ಯ ಸೀಮೆಗೆ ಸೇರಿದ ಅಂತಿಯೋಕ್ಯಕ್ಕೆ ಬಂದರು" (13:14ಎ). ವಿಲಿಯಂ ಬಾರಕ್ಲೆ ವಿವರಿಸಿ, "ಅಪೊಸ್ತಲರ ಕೃತ್ಯದಲ್ಲಿ ಆಶ್ಚರ್ಯಕರವಾದ ನಾಯಕತ್ವವನ್ನು ಒಂದೇ ವಾಕ್ಯದಲ್ಲಿ ತಿಳಿಸಲಾಗಿದೆ."[65]

ಅಪಾಯ ಮತ್ತು ಅನಾರೋಗ್ಯ - ಹೆಚ್ಚಾಗಿರಬಹುದು ಅಥವಾ ಕಡಿಮೆಯಾಗಿರಬಹುದು - ಸಹಿಸಲಾರದ ವೇದನೆಯಿದ್ದರೂ ಸೇವೆಯನ್ನು ಮುಂದುವರೆಸುವ ಸೇವಾ ಕೆಲಸಗಾರರಿಗೆ ಇದು ಕರ್ತನ ಯೋಜನೆಯಾಗಿರುತ್ತದೆ. ಕಷ್ಟದ ಸನ್ನಿವೇಶಗಳಲ್ಲೂ ಪೌಲನಂತೆ, ಸೇವೆಯಲ್ಲಿ ಮುಂದುವರೆಯುವ ವ್ಯಕ್ತಿಗಳಿಗಾಗಿ ನಾವು ದೇವರಿಗೆ ಸ್ತೋತ್ರ ಮಾಡುತ್ತೇವೆ.

## ಮುಕ್ತಾಯ

ಈ ಅಂಶಗಳನ್ನು ಗಮನಿಸುವಾಗ, "ಈ ಸಂಗತಿಯು ಆಸಕ್ತಿಕರವಾದದ್ದೆ ಆದರೆ ಇದಕ್ಕೂ ಮತ್ತು ನನಗೂ ಸಂಬಂದವೇನು? ಯಾಕಂದರೆ ನಾನು, ಸೇವೆ ಮಾಡುವವನಲ್ಲ." ಒಂದು ವೇಳೆ ನೀವು ಕ್ರೈಸ್ತರಾಗಿರುವುದಾದರೇ, ನೀವೆಲ್ಲರೂ ಸೇವಕರೇ. "ದೇವ ಸೇವಕರು"

(ಮಿಷನರಿ) ಎಂಬುದು ಲ್ಯಾಟೀನ ಪದವಾಗಿದ್ದು "ಕಳುಹಿಸಲ್ಪಟ್ಟವನು" ಎಂಬ ಅರ್ಥವನ್ನು ನೀಡುತ್ತದೆ. ಒಂದು ವೇಳೆ ನೀವುಗಳು ನಿಮ್ಮ ಸಭೆಯಿಂದ ಪ್ರಪಂಚದ ಇನ್ನೊಂದು ಸ್ಥಳಕ್ಕೆ ಕಳುಹಿಸಲ್ಪಡದವರಾಗಿರಬಹುದು, ಸೇವಕರ ಕುರಿತು ನಾವು ಯೋಚಿಸುವಾಗ ಪ್ರತಿ ದಿನ ನೀವುಗಳು ಸಂಧಿಸುವ ಜನರಿಗೆ ಸುವಾರ್ತೆಯನ್ನು ಹೇಳುವ ಸೇವೆಗೆ ಕರ್ತನಿಂದ ನೇಮಿಸಲ್ಪಟ್ಟದ್ದೀರಿ (ಮತ್ತಾಯ 28:18-20; ಮಾರ್ಕ 16:15, 16)! ಹಾಸ್ಯಗಾರನಾದ ಫ್ಲಿಪ್ ವಿಲ್ಸನ್‌ಗೆ ಧಾರ್ಮಿಕ ಸಂಬಂಧದ ಕುರಿತು ಪ್ರಶ್ನಿಸಲಾಯಿತು. "ಅದಕ್ಕೆ ಅವನು, ನಾನು ಯಹೋವನ ಸಾಕ್ಷಿಯಾಗಬೇಕಿತ್ತು" ಎಂದು ಹೇಳಿದನು. ನಾನು ಯೆಹೋವನ ಸಾಕ್ಷಿಯಾಗಲು ಅವರು ಬಯಸಿದ್ದರು, ಆದರೆ ನಾನು ಅದಕ್ಕೆ ಒಳಪಡಿಸಿಕೊಳ್ಳಲಿಲ್ಲ. ಸುವಾರ್ತೆಯನ್ನು ಸಾರುವ ವಿಷಯದಲ್ಲಿ ನಾವುಗಳು ಯಾರು ಸಹ ಹಿಂಜರಿಯಬಾರದೆಂದು ನಾನು ನೀರೀಕ್ಷಿಸುತ್ತೇನೆ. ಆದರೆ ನಾವೆಲ್ಲರೂ ನಮ್ಮ ಸ್ನೇಹಿತರುಗಳಿಗೂ, ನೆರೆಯವರಿಗೂ, ಮತ್ತು ಕುಟುಂಬಕ್ಕೂ ಸುವಾರ್ತೆಯನ್ನು ಸಾರುವ ಮಹತ್ವದ ಸವಾಲಿಗೆ ಒಳಗಾಗೋಣ!

ಪ್ರತಿಯೊಬ್ಬ ಕ್ರೈಸ್ತನು ಸೇವಕನಾಗಬೇಕು ಎಂಬುವವರಿಗೆ, ಇದು *ಅತಿಶಯವಾದ* ಪಾಠವಾಗಿರುತ್ತದೆ. ಕರ್ತನ ಮಿಷನರಿಯಾಗಿ: ದೇವರ ಕುಟುಂಬವಾಗಿ ಸ್ನೇಹಿತರಾಗಿ, ಅನ್ಯೋನ್ಯತೆಯುಳ್ಳವರಾಗಿ ನಿಮ್ಮ ಜೀವಿದಲ್ಲಿ ದೇವರ ಉದ್ದೇಶವನ್ನು ನೆರವೇರಿಸುವ ಮೂಲಕ ಅದರಿಂದುಟಾಗುವ ಆಶೀರ್ವಾದಗಳ ನಿಮಿತ್ತ ನೀವು ಆನಂದಿಸಬಹುದು. ಅದೇ ಸಮಯದಲ್ಲಿ ಕರ್ತನಿಗಾಗಿ ನಿಲ್ಲುವಾಗ ಉಂಟಾಗುವ ಅಡಚಣೆಗಳನ್ನು ಎದುರಿಸಲು ಸಿದ್ಧರಾಗಿರಬೇಕು. ನಾವು ಈಗಾಗಲೇ ತಿಳಿಸಿರುವಂತ ಸಕಲ ಅಥವಾ ಅವುಗಳಲ್ಲಿ ಯಾವುದಾದರೂ ಒಂದು ಅಡಚಣೆಗಳು ನಿಮ್ಮ ಮುಂದೆ ಬರಬಹುದು. ಅಧೈರ್ಯ ಹಾಗೂ ತಿರಸ್ಕಾರ, ಅವಮಾನ ಹಾಗೂ ವಂಚನೆ, ಪರಿತ್ಯಾಗ ಹಾಗು ಆಶಾಭಂಗ, ಅಪಾಯ ಹಾಗು ಅನಾರೋಗ್ಯ ಬರಬಹುದು, ಇವುಗಳು ಉಂಟಾಗು ವಾಗ (ಅಪೊಸ್ತಲನಂತೆ) ಆನಂದಿಸಿರಿ. "ಆ ಹೆಸರಿನ ನಿಮಿತ್ತವಾಗಿ ಅವಮಾನ ಪಡುವದಕ್ಕೆ ಯೋಗ್ಯನೆನಿಸಿಕೊಂಡೆನೆಂದು ಸಂತೋಷಿಸಿರಿ" (5:41) - ಮತ್ತು ಆತನಲ್ಲಿ ಭರವಸವಳ್ಳವಾಗಿರ್ರಿ!

---

## ಪ್ರಸಂಗದ ಟಿಪ್ಪಣಿಗಳು

ಅಂತಿಯೋಕ್ಯದಲ್ಲಿರುವವರಿಗಾಗಿ, ಬಾರ್ನಬನು ಮಾಡಿದ ಸಂದೇಶವು ಬೋಧನೆಗೆ ಒಳ್ಳೆಯ ವಿಷಯವಾಗಿರುತ್ತದೆ. ಅವನು ಅಲ್ಲಿಗೆ ಬಂದಾಗ "ದೇವರ ಕೃಪಾಕಾರ್ಯವನ್ನು ನೋಡಿದಾಗ ಸಂತೋಷಪಟ್ಟು ನೀವು ದೃಢ ಮನಸ್ಸಿನಿಂದ ಕರ್ತನಲ್ಲಿ ನೆಲೆಗೊಂಡಿರ್ರಿ ಎಂದು ಬುದ್ಧಿವಾದ ಹೇಳಿದನು" (11:23). ಕ್ರೈಸ್ತ ಜೀವನವನ್ನು ಆರಂಭಿಸಿದವರು ಅನೇಕರು ಹಿಂಜರಿದು ಹೋಗಿರುವರು! ದೃಢವಾಗಿ ನಿಲ್ಲಿರಿ ಎಂದು ಉತ್ತೇಜಿಸುವ ಬಾರ್ನಬರಂತಹ ಜನರ ಅಗತ್ಯತೆಯು ನಮಗುಂಟು. ಆ ಪಾಠಕ್ಕೆ "ಕರ್ತನಿಗಾಗಿ ದೃಢವಾಗಿ ನಿಲ್ಲಿರಿ ಎಂಬ ತಲೆಬರಹವನ್ನು ನೀಡಬಹುದು." ಅದರಲ್ಲಿರುವ ಮುಖ್ಯ ಅಂಶಗಳು (1) ನಿಮಗಾದ ಆಶೀರ್ವಾದಗಳನ್ನು ನೆನಪು ಮಾಡಿಕೊಳ್ಳಿರಿ ("ಅವನು ಸಂತೋಷಿಸಿದನು"), (2) ನಿಮ್ಮ ಸಹೋದರರ ನೆನಪು ಮಾಡಿಕೊಳ್ಳಿರಿ ("ಅವರನ್ನು ಪ್ರೋತ್ಸಾಹಿಸಿದನು"), (3) ನಿಮ್ಮ ಸಮರ್ಪಣೆಯನ್ನು ನೆನಪು ಮಾಡಿಕೊಳ್ಳಿರಿ. ("ಹೃದಯವನ್ನು ಉತ್ತೇಜಿಸಿದನು"), ಮತ್ತು (4) ನಿಮ್ಮ ಕರ್ತನನ್ನು ನೆನಪು ಮಾಡಿಕೊಳ್ಳಿರಿ ("ಕರ್ತನಿಗೆ ಸತ್ಯವಾಗಿ ನಡಕೊಳ್ಳಿರಿ")."

---

ಟಿಪ್ಪಣಿಗಳು

[1]ಬಾರ್ನಬನ ಸಂಬಂಧಿಯಾದ ಮರಿಯಳ ಮನೆಯಲ್ಲಿ ಈ ಕೂಟ ಜರುಗಿತ್ತು. [2]ಈ ವಾಕ್ಯದ ಅನುವಾದದಲ್ಲಿ ತೊಡಕುಗಳಿವೆ "ಯೆರೂಸಲೇಮಿನಿಂದ" ಹಿಂದಿರುಗಿದರು ಅನೇಕ ಅನುವಾದಕರು

ಈ ವ್ಯಾಖ್ಯಾನ ಸತ್ಯವಾಗಿರಬಹುದೆಂದು ತಿಳಿದಿರುವರು. [3]ಇದು, ಪೌಲನು ಹೊಂದಿದ, "ದೇವಾಲಯದ ದರ್ಶನ" ಎಂಬುದು ಕೆಲವರ ಅಭಿಪ್ರಾಯ (22:17-21) ಯೆರೂಸಲೇಮಿನ ಪ್ರವಾಸದಲ್ಲಿ ಉಂಟಾಯಿತು, ಪೌಲನ ಮೊದಲ ಸೇವಾ ಪಯಣದ ಕುರಿತ ದರ್ಶನವಾಗಿದೆ. ಅವನ ಪರಿವರ್ತನೆಯ ನಂತರ (9:26-30). [4]ಯೆರೂಸಲೇಮಿನವರಿಗಾಗಿ ಆದ ಎರಡನೆಯ ದ್ರವ್ಯ ಸಹಾಯವನ್ನು "ದೇವ ಜನರಿಗೆ ಮೆಚ್ಚಿಗೆಯಾಯಿತು ಎಂಬ ಅರ್ಥ" (ರೋಮಾಪುರ 15:31). ಯೂದಾಯದ ಕ್ರೈಸ್ತರು ಪ್ರತಿರೋಧವಿಲ್ಲದೆ ಆ ದ್ರವ್ಯವನ್ನು ಪಡೆದರು ಎಂಬ ನಂಬಿಕೆ ನನಗಿದೆ. ನೀವು ಯಾವಾಗಲೂ ಕೊಡುವವದಾದರೆ, ಸ್ವೀಕರಿಸಲು ಹಿಂಜರಿಯುವಿರಿ. [5]12:12ರ ಟಿಪ್ಪಣಿ ನೋಡಿರಿ. [6]ಕೊಲೊಸ್ಸೆ 4:10ರ KJV ಅನುವಾದವು, ಮಾರ್ಕನು, ಬಾರ್ನಬನ ಚಿಕ್ಕಪ್ಪನ ಮಗನು ಎಂದು ಹೇಳುತ್ತದೆ. ಗ್ರೀಕ್ ಭಾಷೆಯ "ಕಸಿನ್" ಎಂಬುದು ಇಂಗ್ಲೀಷ್ ಭಾಷೆಯಲ್ಲೂ "ಕಸಿನ್" ಎಂಬುದಾಗಿದೆ, ಅವನು ಹತ್ತಿರದ ಸಂಬಂಧಿ ಎಂಬ ಸೂಚನೆ. [7]*ಅಪೊಸ್ತಲರ ಕೃತ್ಯಗಳು, 2ರಲ್ಲಿ* ವಂಶಾವಳಿಯನ್ನು ನೋಡಿರಿ. [8]ಸುವಾರ್ತೆಯನ್ನು ಸಾರುವದರಿಂದ ಉಂಟಾಗುವ ಸಿಹಿ ಮತ್ತು ಕಹಿ ಅನುಭವದ ಕುರಿತು (ಪ್ರಕಟನೆ 10:9-11)ರಲ್ಲಿ ಗಮನಿಸುತ್ತೇವೆ. [9]"ಬೆಳಸಿದನು" ಎಂಬ ಗ್ರೀಕ್ ಅನುವಾದ, ASV ಯಲ್ಲಿ "ಸಾಕಲ್ಪಟ್ಟ ಸಹೋದರನು" RSV ಯಲ್ಲಿ "ಆ ಸ್ಥಾನದ ಸದಸ್ಯನು." [10]ಪ್ರೇರತರಾಗಿ ಮಾತನಾಡುವದು, ದೇವರಾತ್ಮನ ವರವಾಗಿದೆ (1 ಕೊರಿಂಥ 12:28, 29). ಪ್ರವಾ ದನೆ ಹಾಗೂ ಉಪದೇಶದ ವರವಿತ್ತು ಎಂದು ಕೆಲವರು ತರ್ಕಮಾಡಿರುವರು.

[11]ಆ ಐದು ಜನರಲ್ಲಿ ಈ ಎರಡು ವರಗಳಿದ್ದವು (ಸೌಲ/ಪೌಲರಲ್ಲೂ ಇತ್ತು) ಕೆಲವರ ಅಭಿಪ್ರಾಯದಂತೆ ಸಿಮೆಯೋನನು ಕುರೇನೆ ಪಟ್ಟಣದವನಾಗಿರಬಹುದು. ಇವನು (ಮತ್ತಾಯ 27:32ರ) ಕುರೇನ್ಯದ ಸಿಮೆಯೋನನಾಗಿರಬಹುದು. ನಾವು ಅದನ್ನು ಅರಿಯೆವು. [12]ಸಿಮೆಯೋನನು ಕುರೇನ್ಯದವನಾಗಿದ್ದರೆ, ಅದು ಆಫ್ರಿಕದ ಪ್ರದೇಶವಾಗಿದೆ. ಅವನು ಒಂದು ವೇಳೆ "ನೀಗ್ರೊ" ಆಗಿರಬಹುದು. ಸಿಮೆಯೋನ ಎಂಬುದು ಗ್ರೀಕ್ ಭಾಷೆಯ "ನೀಗೆರ್" ಎಂಬ ಹೆಸರಾಗಿದೆ ಅಥವಾ "ಕಪ್ಪು" ಯೆಹೂದ್ಯರಿಗಿಂತ ಅವನು ಕಪ್ಪು ವರ್ಣದವನಾಗಿರಬಹುದು (ನಿಗೇಲ್ ಎಂಬುದು ದೊಡ್ಡ ಶಬ್ಧದನಾಮ). [13]"ಲೂಕ್ಯನು" ಸಾಮಾನ್ಯವಾದ ಗ್ರೀಕ್ ಹೆಸರು. ಹೊಸ ಒಡಂಬಡಿಕೆಯಲ್ಲಿ ಅನೇಕರನ್ನು ಈ ಹೆಸರಿನಿಂದ ಕರೆಯಲಾಗಿದೆ. [14]"ತಾನು ದೇವರೆಂದು ತಿಳಿದ" ಪಾಠವನ್ನು ನೋಡಿರಿ "ಮನಹೀನ" ಎಂಬುದು ಲೂಕನು ಅಧ್ಯಯನದ ಮೂಲದ ಎರಡು ಪುಸ್ತಕವಾಗಿರಬಹುದು. [15]ವಚನ 3ರಲ್ಲಿ ಐದು ಹೆಸರುಗಳಿದ್ದರೂ, ಪೂರ್ಣವಾದ ಸಭೆ ಎಂದಿರಬಹುದು. [16]"ಸೇವೆ ಮಾಡುತ್ತಿದ್ದರು" "ಸೇವೆ ಮಾಡಿಸಿಕೊಳ್ಳುತ್ತಿದ್ದರು" ಎಂಬುದು ಗ್ರೀಕ್ ತರ್ಜುಮೆ ಅದನ್ನು "ಆರಾಧನೆಗೆ" ಬಳಸುತ್ತಿದ್ದರು. NIV ಯಲ್ಲಿ "ಅವರು ದೇವರನ್ನು ಆರಾಧಿಸುವಾಗ" ಉಪವಾಸವು ಹೊಸ ಒಡಂಬಡಿಕೆಯಲ್ಲಿ ಪ್ರಾರ್ಥನೆಗೆ ಸಂಬಂಧಪಟ್ಟಿರುವದರಿಂದ, ದೇವರ ಸಾಮಾನ್ಯ ಕೂಟದಲ್ಲಿ, ಅದನ್ನು ಆರಾಧನೆಗೂ ಹೋಲಿಸಲಾಗಿದೆ. [17]KJVಯಲ್ಲಿ ಉಪವಾಸವನ್ನು, ಕೊರ್ನೇಲಿಯನ ಪ್ರಾರ್ಥನೆಗೆ ಸಂಬಂಧಿಸಲಾಗಿದೆ (10:30). ಆದರೆ ಉತ್ತಮವಾದ ಅನುವಾದವು KJVಯ ಹೇಳಿಕೆಯನ್ನು ಸಮ್ಮತಿಸುವದಿಲ್ಲ, [18]ಈ ಪುಸ್ತಕದಲ್ಲಿರುವ "ಉಪವಾಸ ಹಾಗೂ ಕ್ರೈಸ್ತರ" ಅಧಿಕ ಪಾಠವನ್ನು ಗಮನಿಸಿರಿ. [19]"ಸೇವೆ" ಎಂಬ ಗ್ರೀಕ್ ತರ್ಜುಮೆ "ಆರಾಧಿಸಲ್ಪಟ್ಟನು" ಎಂಬುದಾಗಿದೆ. [20]"ಮಿಷನ್ ಥಿಯಾಲಜಿಯನ್ನು" ಪರಿಣಿತರು ಅನೇಕ ವರ್ಷಗಳ ಕಾಲ ಅಧ್ಯಯನ ಮಾಡಿರುವರು.

[21]ಸಭೆಯು ಈ ಹಿಂದೆ ಯಾದಾಯದವರಿಗೆ ದ್ರವ್ಯವನ್ನು ರವಾನಿಸಲು ಬಾರ್ನಬ ಮತ್ತು ಸೌಲರನ್ನು ಆಯ್ಕೆ ಮಾಡಿಕೊಂಡಿದ್ದರು, ಈ ಸಮಯದಲ್ಲಿ ಅನೇಕರು ಸೌಲನನ್ನು ಸಂಬಂಧ ಪಟ್ಟ ವ್ಯಕ್ತಿಯಾಗಿ ಪರಿಗಣಿಸಿದ್ದರು. [22]ಮುಂದೆ, ಈ ಪುಸ್ತಕದಲ್ಲಿರುವ "ಹಸ್ತಾರ್ಪಣೆ" ಕುರಿತು ನೋಡಿರಿ. [23]F. F. Bruce. [24]ಇದೇ ವಿಧವಾದ ಕೂಟಗಳನ್ನು ನಡೆಸುವ ಹಿರಿಯರನ್ನು ಕುರಿತು ಅಪೊಸ್ತಲರಕೃತ್ಯಗಳು 14:23ನ್ನು ನೋಡಿರಿ. [25]ಲ್ಯಾಟಿನ ಭಾಷೆಯಲ್ಲಿ "ಮಿಷನರಿ" ಎಂಬ ಸಮಾನಪದವನ್ನು ನೋಡಿರಿ. [26]14:23ರ ಟಿಪ್ಪಣಿ ನೋಡಿರಿ. ಆ ವಚನದಲ್ಲಿ ಮಿಷನರಿಗಳ ನಿಯಮದ ಕೂಟ ಎಂಬುದಾಗಿದೆ. [27]ಮಾರ್ಕನೆನಿಸಿಕೊಳ್ಳುವ ಯೋಹಾನನ "ಸೇವಾ ಪಾತ್ರದ" ಚರ್ಚೆಗಾಗಿ ಸಾಮಾನ್ಯ ದೇವರ ಚಿತ್ತ ಎಂಬುದನ್ನು ನೋಡಿರಿ. [28]ಅವನು ಸಹಾಯಕನು ಎಂದು ಸ್ಪಷ್ಟಪಡಿಸಲಾಗಿದೆ. ಅವನು ವಿಶೇಷವಾದ "ಪಾತ್ರವನ್ನು" ಹೊಂದಿರಲಿಲ್ಲ. ಅವರ ಅಗತ್ಯತೆಗಳನ್ನು ನೀಗಿಸುವದಕ್ಕಾಗಿ ಕರೆಯಲ್ಪಟ್ಟಿದ್ದನು (ಅವನು ಮಿಷನರಿ ತರಬೇತಿಗಾಗಿ ಬಂದಿರಬಹುದು. ಬಾರ್ನಬ ಸೌಲರು ಸೇವೆಗಾಗಿ ಯೌವನಸ್ಥರನ್ನು ತರಬೇತಿಗೊಳಿಸುತ್ತಿದ್ದರು.) [29]ಸೇವಾ ಪ್ರಯಾಣವು ದೇವರ ಮಾರ್ಗದರ್ಶನದ ಫಲಿತಾಂಶವೆಂದು ಲೂಕನು ತಿಳಿಸಿ, ಅದು ಅಂತಿಯೋಕ್ಯದ "ಸೇವಾಮಂಡಳಿಯ" ನಿರ್ಣಯಾಗಿರಲಿಲ್ಲ. ಎಂದು ಲೂಕನು ಸ್ಪಷ್ಟಪಡಿಸಿರುವನು. [30]ಪೌಲನ ಮೊದಲ ಹಾಗೂ ಎರಡನೆಯ ಸೇವಾ ಪ್ರಯಾಣದ ನಕ್ಷೆಯನ್ನು ನೋಡಿರಿ. ಅದು ಮೊದಲು ಅಂತಿಯೋಕ್ಯದಲ್ಲಿ ಸ್ಥಾಪನೆಗೊಂಡಿತ್ತು.

[31]ಪೌಲನ ಮೊದಲ ಹಾಗೂ ಎರಡನೆಯ ಸೇವಾ ಪ್ರಯಾಣದ ನಕ್ಷೆ ನೊಡಿಲಿ. [32]ಕುಪ್ರವು 140 ಮೈಲುಗಳು ಉದ್ದ, 60 ಮೈಲು ಅಗಲವಾಗಿತ್ತು. [33]"ಸೇವಕರ" ಪ್ರಯಾಣದ ಅವಧಿಯನ್ನು ಪರಿಶುದ್ಧಾತ್ಮನು ತಿಳಿಸಿರುವದನ್ನು ನಾವು ಅರಿಯೆವು. ಪ್ರಾಯಶಃ ಸ್ಥಳವನ್ನು ಅವರೇ ಆಯ್ಕೆ ಮಾಡಿರಬಹುದು. ಪೌಲನು ನಾಯಕತ್ವವನ್ನು ಒಂದು ವೇಳೆ ಹೊಂದದಿದ್ದರೆ, ಕುಪ್ರದಿಂದ ಆರಂಭಮಾಡುತ್ತಿರಲಿಲ್ಲ, ಯಾಕಂದರೆ ಈಗಾಗಲೇ ಅಲ್ಲಿ ಸುವಾರ್ತೆ ಸಾರಲಾಗಿತ್ತು, ಯೆಹೂದ್ಯರಿಗಾದರೂ ಸಾರೋಣವಾಗಿತ್ತು (11:19; ರೋಮಾಪುರ 15:20). [34]ಈ ಅಂಶದವರೆಗೂ, "ಸೇವಾಬಾರವು" ವ್ಯಯಕ್ತಿಕವಾದ ಪರಿಣಾಮವಾಗಿತ್ತು. ಸಭೆಯು ಮುಂದಾಳತ್ವ ವಹಿಸಿರಲಿಲ್ಲ. [35]ಹವಾಲಿಯ ಬದಲಾಗಿ ಇತರೆ ವಿಶ್ರಾಂತಿ ಸ್ಥಳಗಳನ್ನು ತಿಳಿಸಬಹುದು. [36]"ಮಂತ್ರವಾದಿ," ಎಂಬ ಪದವನ್ನು ಗ್ರೀಕ್ ಭಾಷೆಯಲ್ಲಿ ತರ್ಜುಮೆ ಮಾಡಿ "ತಂತ್ರ ಮಂತ್ರ" ಎನ್ನಲಾಗಿದೆ ಅದು ಮಂತ್ರವಾದಿಯಾದ ಸಿಮೋನನ ಕಥೆಯಲ್ಲಿದೆ (8:9-11). ಹಳೇ ಒಡಂಬಡಿಕೆಯಲ್ಲಿ ಮಾಟ ನಿಷೇಧಿಸಲಾಗಿದೆ. ಯೆಹೂದ್ಯರು ಅದ್ಭುತ ಕೆಲಸವನ್ನು ಹೊಂದಿಕೊಂಡಿದ್ದರು (ಮತ್ತಾಯ 12:27; ಲೂಕ 11:19; ಅಪೊಸ್ತಲಕೃತ್ಯಗಳು 19:13). [37]ಸಳ್ಳು ಹಾಗೂ ಸತ್ಯ ಪ್ರವಾದಿಗಳ ಕುರಿತು ಮೋಶೆಯು ಪರೀಕ್ಷೆಯ ತಂತ್ರವನ್ನಿಟ್ಟಿದ್ದನು (ಧರ್ಮೋಪದೇಶಕಾಂಡ 13:1-7; 18:20-22). [38]ರೋಮಾಯರ ಅಧಿಕಾರಿಯನ್ನು ಕುಪ್ರದ "ಅರಸನು" ಎಂದು ಕರೆಯುವಲ್ಲಿ ಲೂಕನು ತಪ್ಪಾಭಿಪ್ರಾಯವನ್ನು ನೀಡಿರುವನೆಂದು ಅನೇಕ ವರ್ಷಗಳ ಕಾಲ ನಂಬಲಾಗಿತ್ತು. ಹೇಗೂ, ಕುಪ್ರದ ಸೋಲಿಯಲ್ಲಿ ದೊರೆತ ಶಿಲಾಶಾಸನದಲ್ಲಿ ಪೌಲನ ಅಧಿಕಾರದ ಅವಧಿಯಲ್ಲಿ ನಡೆದ ಘಟನೆಯನ್ನು ತಿಳಿಸಲಾಗಿದೆ. [39]ಲೂಕನ ಪ್ರಕಾರ "ಎಲಿಮನು" ಎಂದರೆ "ಮಂತ್ರವಾದಿ" ಕೆಲವರ ಅಭಿಪ್ರಾಯದಂತೆ ಎಲಿಮನು ಎಂಬುದು ಅರೇಬಿಕ; ಇನ್ನು ಕೆಲವರು ಅದು ಇತರ ಭಾಷೆಯೆಂದು ತಿಳಿದಿರುವರು. ಅದು ಲೂಕನು ತಿಳಿಸಿದಂತೆ "ಮಂತ್ರವಾದಿ" ಎಂಬರ್ಥ. [40]ಇಲ್ಲಿ ಬಳಸಿರುವ ಕಾಲಗಳನ್ನು ಗ್ರೀಕ್ ಭಾಷೆಯಲ್ಲಿ ತರ್ಜುಮೆ ಮಾಡಿ "ಅವನು ವಿರೋಧಿಸಿದ್ದನು" ಅದು ಏಕಕಾಲದ ಪ್ರತಿಕ್ರಿಯೆಯಾಗಿರದೇ ಮುಂದುವರೆದಿದ್ದಾಗಿತ್ತು.

[41]"ಆತ್ಮಭರಿತ" ಎಂಬುದು "ಪವಿತ್ರಾತ್ಮನ ಹತೋಟಿಗೆ ಒಳಪಡುವದು" ಎಂಬ ಸೂಚನೆ ಇದರಲ್ಲಿ ಅದ್ಭುತವಾದ ಸಂಬಂದವಿದೆ. [42]"ವಂಚನೆ" ಎಂಬ ಪದವು ಸಿಕ್ಕಿಬೀಳು ಎಂಬ ಗ್ರೀಕ್ ಅರ್ಥವಾಗಿದೆ. [43]ಪೌಲನು "ಶಾಂತತೆಯನ್ನು ಕಳಕೊಂಡನು" ಎಂಬುದನ್ನು ಕೆಲವರು ಟೀಕಿಸಿದ್ದಾರೆ. ಹೇಗೂ ಸೌಲನು ಪ್ರೇರಿತನಾಗಿ ಮಾತನಾಡುತ್ತಿದ್ದನು; ಅವನು ಕರ್ತನ ಪ್ರತಿನಿಧಿಯಾಗಿ ಈ ಮಾತನ್ನು ಹೇಳಿ ದನು (ವಚನ 11). [44]"ಯೇಸು" ಎಂಬುದು ಗ್ರೀಕ್ ಪದದ "ಯೆಹೋಶುವ" ಎಂಬ ಆಕಾರ ಯೆಹೋಶುವ ಮತ್ತು ಯೇಸು ಎಂಬುದು ಹೊಸ ಒಡಂಬಡಿಕೆಯ ಸಾಮಾನ್ಯ ಹೆಸರುಗಳಾಗಿದ್ದವು. [45]ಗ್ರೀಕ್ ಪದವಾದ "ಮಿಸ್ಟ್" ಎಂಬ ಪದವನ್ನು ಕಣ್ಣಿನ ರೋಗದ ವಿವರಣೆಗಾಗಿ ವೈದ್ಯರ ವ್ಯಾಖ್ಯಾನವಾಗಿತ್ತು. ಲೂಕನು ತನ್ನ ವೈದ್ಯ ವೃತ್ತಿಯ ಹಿನ್ನಲೆಯನ್ನು ತೋರಿಸುತ್ತಿದ್ದಾನೆ. [46]ಅಧ್ಯಾಯ 5ರಲ್ಲಿ ಅನನೀಯ ಹಾಗೂ ಸಫೈರಳ ಮರಣವು ದೇವರ ನೇರವಾದ ಶಿಕ್ಷೆ, ಅದು ಪೇತ್ರನು ಮಾಡಿದ ಮಹತ್ಕಾರ್ಯವಲ್ಲ. [47]W. M. Ramsay, *St. Paul the Traveller and the Roman Citizen* (Grand Rapids, Mich.: Baker Book House, 1975), 79. [48]ಮೋಶೆಯು ಫರೋಹನನ ಮಂತ್ರವಾದಿಗಳನ್ನು ಎದುರಿಸಿದ ಸಂಗತಿಗೆ ಹೋಲಿಸಬಹುದು (ವಿಮೋಚನಕಾಂಡ 7-9; 2 ತಿಮೊಥೆ 3:8). [49]ಬಾರ್ ಯೇಸು ಮಾನಸಾಂತರ ಪಡಲಿಲ್ಲ; ಕರ್ತನ ಶಿಕ್ಷೆಯ ಮೂಲಕ ಅವನು ಲಾಭಪಡೆಯಲಿಲ್ಲ. [50]16:34ರಲ್ಲಿ "ದೇವರಲ್ಲಿ ನಂಬಿಕೆಯಿಟ್ಟನು" ಎಂಬ ವ್ಯಾಖ್ಯಾನವು ಸೆರೆಯ ಯಜಮಾನನ ಮಾನಸಾಂತರದಲ್ಲೂ ಮತ್ತು ದೀಕ್ಷಾಸ್ನಾನದಲ್ಲೂ ಒಳಗೊಂಡಿರುತ್ತದೆ (ವಚನ 33). ಅಪೊಸ್ತಲರ ಕೃತ್ಯಗಳು 18:8; ಲಿಂದ 1 ಕೊರಿಂಥ 1:14 ರವರೆಗಿನ ವಾಕ್ಯಭಾಗದಲ್ಲಿರುವ ಕ್ರಿಸ್ತನ ಪರಿವರ್ತನೆಯನ್ನು ಉದಾಹರಿಸಿಲಿ.

[51]"ಪೌಲ" ಎಂದರೆ "ಚಿಕ್ಕವನು" ಎಂಬರ್ಥ. ಸರ್ಗಿ ಪೌಲನ ಆಸ್ಥಾನದಲ್ಲಿ ಸೌಲನಿಗೆ ಪೌಲ ಎಂಬ ಹೆಸರನ್ನು ನೀಡಲಿಲ್ಲ. ಅವರು ಕುಪ್ರವನ್ನು ಪ್ರವೇಶಿಸುವ ಮೊದಲೇ ಅವನನ್ನು ಪೌಲನೆಂದು ತಿಳಿದಿದ್ದರು. [52]ಪೌಲನ ಸೇವೆಯ ಪ್ರಥಮ ವರ್ಷಗಳಲ್ಲಿ ಸೌಲನೆಂಬ ಹೆಸರನ್ನು ಬಳಸುತ್ತಿದ್ದರು. [53]ಒಪ್ಪಿಕೊಳ್ಳುವಿಕೆಗಳು ಏನೆಂದರೆ (1) ಲುಸ್ತ್ರದವರು ಬಾರ್ನಬನನ್ನು ಪ್ರಥಮ ಸ್ಥಾನದಲ್ಲಿಟ್ಟಿದ್ದರು (14:12, 14 ಮತ್ತು), (2) ಅವರು ಯೆರೂಸಲೇಮಿಗೆ ಹಿಂತಿರುಗಿದಾಗ ಬಾರ್ನಬನನ್ನು ಮಹತ್ವದ ಸ್ಥಾನದಲ್ಲಿಟ್ಟಿದ್ದರು (15:12, 25). [54]ಇಲ್ಲಿ ಬಾರ್ನಬನ ಮೆಚ್ಚುಗೆಯ ಇನ್ನೊಂದು ಕಾರ್ಯವನ್ನು ನೋಡುತ್ತೇವೆ: ಪೂರ್ಣ ಸಾಮರ್ಥ್ಯದಿಂದ ದೇವರಿಗೆ ಒಬ್ಬ ನಾಯಕನಾಗಿಯೂ ಒಬ್ಬ ಅನುಯಾಯಿಯಾಗಿಯೂ - ದೂರುಗಳನ್ನು ಹೇಳದೇ ಸೇವೆ ಮಾಡುತ್ತಿದ್ದನು. [55]ಆದಿಯಲ್ಲಿ ಕ್ರೈಸ್ತ ಬರವಣಿಗೆಗಾರನಾಗಿದ್ದ "ಜಾನ್ ಕ್ರಿಸೊಸ್ಟಂ" ಮಗುವಿಗೆ ತಾಯಿಯ ಅಗತ್ಯವಿದೆ ಎಂದು ಹೇಳಿರುವನು. ಅವನು ಅನ್ಯರಿಗೆ ಸುವಾರ್ತೆಯನ್ನು ಸಾರುವಲ್ಲಿ ಪೂರ್ಣವಾಗಿ ಸ್ವತಂತ್ರನಾಗಿರಲಿಲ್ಲವೆಂಬ ಹೇಳಿಕೆಯಿದೆ. [56]ಸೇವೆಯಿಂದ ಮನೆಗೆ ಹಿಂದಿರುಗುವದು ನಮ್ಮ ಸ್ವಂತ ಹಕ್ಕಾಗಿರುತ್ತದೆ. ಈ ಭಾಗದಲ್ಲಿ

ತಿಳುವಳಿಕೆಯಿಲ್ಲದ "ಮಾರ್ಕನೆನಿಸಿಕೊಳ್ಳುವ ಯೋಹಾನನು" ಕುರಿತು ಮಾತನಾಡುತ್ತಿದ್ದೇನೆ. [57]ಪಿಸಿದ್ಯ ಅಂತಿಯೋಕ್ಯ ಮತ್ತು ಅವರು ಸಂಧಿಸಿದ ಇತರೇ ಪಟ್ಟಣಗಳು ರೋಮಾದ ಗಲಿಲಾಯ ಪ್ರದೇಶದ ದಕ್ಷಿಣ ಭಾಗದಲ್ಲಿದ್ದವು. [58]ಆಸ್ಯ ಸೀಮೆಯ (ಈಗಿರುವ ಟರ್ಕಿ) ಪ್ರದೇಶದಲ್ಲಿ ವಿಮಾನ ಸಂಚಾರ ಮಾಡಿರುವೆನು ಅದು ಕಠಿಣವಾದ ದೇಶವಾಗಿದೆ! [59]"ಕಳ್ಳರಿಂದ ಅಪಾಯದ ಕುರಿತು" ಮಾತನಾಡುವಾಗ ಪೌಲನು ಈ ಪ್ರಯಾಣವನ್ನು ನೆನಪು ಮಾಡಿಕೊಂಡಿರಬಹುದು (2 ಕೊರಿಂಥ 11:26). [60]"ಈ ಸಂಚಾರವು ಅಸಾಧ್ಯವೇ?" ರಿಕ್ ಆ್ಯಚ್ಲೆಯವರ ಹೇಳಿಕೆ. ಚರ್ಚ್ ಆಫ್ ಕ್ರೈಸ್ಟ ಅಭಿಲೇನನ್ ಒಂದು ಸಂದೇಶ.

[61]ಪೌಲನ ಮೊದಲ ಪ್ರಯಾಣದಲ್ಲಿ ಸ್ಥಾಪಿತಗೊಂಡ ದಕ್ಷಿಣ ಗಲಾತ್ಯಕ್ಕೆ ಅಥವಾ ಉತ್ತರ ಗಲಾತ್ಯದಲ್ಲಿರುವ ಅರಿಯದ ಸಭೆಗಳಿಗೆ, ಗಲಾತ್ಯ ಪತ್ರಿಕೆಯು ಬರೆಯಲ್ಪಟ್ಟಿದೆಯೇ ಎಂಬುದು ಅನೇಕ ವರ್ಷಗಳ ಚರ್ಚೆಯಾಗಿದೆ. ಆಧುನಿಕ ಪಂಡಿತರುಗಳ ನಂಬಿಕೆಯಂತೆ ಆ ಪತ್ರವು ದಕ್ಷಿಣ ಗಲಾತ್ಯದವರಿಗೆ ಬರೆಯಲ್ಪಟ್ಟಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. [62](14:25)ರ ಪ್ರಕಾರ ಅವನು ಮತ್ತು ಬಾರ್ನಬರು ಮನೆಗೆ ಹಿಂದಿರುಗುವವರೆಗೆ ಪೆರ್ಗೆಯಲ್ಲಿ ಪ್ರಸಂಗಿಸಲಿಲ್ಲ. [63]ಪಂಫುಲ್ಯವು "ಮಲೇರಿಯಾ ರೋಗವನ್ನು" ಪಡೆಯುವಲ್ಲಿ ಪ್ರಪಂಚದಲ್ಲಿ ಪ್ರಥಮ ಸ್ಥಾನವನ್ನು ಹೊಂದಿರುತ್ತದೆ. ಮಲೇರಿಯಾ ರೋಗವೇ "ಪೌಲನ ದೇಹದಲ್ಲಿ ಶೂಲ" ಎಂಬುದು ಕೆಲವರ ಅಭಿಪ್ರಾಯ (2 ಕೊರಿಂಥ 12:7, 8). ಇದನ್ನು ನಾವು ಅರಿತಿರುವದಿಲ್ಲ. [64]Atchley. [65]William Barclay, *The Acts of the Apostles,* The Daily Study Bible Series, rev. ed. (Philadelphia: Westminster Press, 1976), 102.